ರಾಯಚೂರು, ಕೊಪ್ಪಳ, ಯಾದಗಿರಿ, ಕಲಬುರ್ಗಿ, ಬಳ್ಳಾರಿ, ವಿಜಯನಗರ, ಬೀದರ, ಏಕಕಾಲಕ್ಕೆ ಪ್ರಕಟಣೆ

Raichur, Koppal, Yadagiri, Kalburgi, Ballary, Vijaya Nagar, Bidar

ರಾಯಚೂರಿನಿಂದ ರಾಜ್ಯದವರೆಗೆ

# ಕನ್ನಡ ಮಾತೃ ಭೂಮಿ

ಕನ್ನಡದಿನ ಪತ್ರಿಕೆ


ಸಂಪಾದಕರು : ಶ್ಯಾಮ್ ಸುಂದರ್.ಎಲ್
EDITOR : SHYAM SUNDER L

KANNADA MATHRUBHOOMI
KANNADA DAILY PAPER

mathrubhoomircr@gmail.com
Call : 9886635117

ಸಂಪುಟ : Volume : 03 | ಸಂಚಿಕೆ Issue : 177 | ದಿನಾಂಕ : 27-04-2026 Date : 27-04-2026 | ಸೋಮವಾರ Monday | RNI: Karkan/2023/89199 Post Reg No.: RCR/L/RNP/98/2025-2027 | ರಾಯಚೂರು Raichur | ಪುಟ : Pages : 04 | ರೂ Rs. 2

## ಬೋಳಮಾನದೊಡ್ಡಿ ರಸ್ತೆಯಲ್ಲಿ ಪಕ್ಷಿಗಳಿಗೆ ನೀರುಣಿಸುವ ನರಸಿಂಹಲು ಕಾರ್ಯಕ್ಕೆ ಡಾ.ಶಿವರಾಜ ಪಾಟೀಲ್ ಮೆಚ್ಚುಗೆ



■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.26**–ಬೇಸಿಗೆ ಹಿನ್ನಲೆಯಲ್ಲಿ ಪಕ್ಷಿಗಳಿಗೆ ನೀರುಣಿಸಲು ಗಿಡಗಳಿಗೆ ನೀರಿ ತೊಟ್ಟಿಕಟ್ಟುವ ಕೆಲಸ ಮಾಡುತ್ತಿರುವ ನರಸಿಂಹಲು ಎಂಬುವವರ ಕಾರ್ಯವನ್ನು ಶಾಸಕ ಡಾ.ಶಿವರಾಜ ಪಾಟೀಲ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಅವರಿಂದು ಬೋಳಮಾನದೊಡ್ಡಿ ರಸ್ತೆಯಲ್ಲಿ ತೆರಳುತ್ತಿದ್ದಾಗ ಗಿಡಗಳಿಗೆ ನೀರಿನ ತೊಟ್ಟಿ ಕಟ್ಟುವ ಕೆಲಸ ಮಾಡುತ್ತಿದ್ದ ನರಸಿಂಹಲು ಇವರನ್ನು ಭೇಟಿ ಮಾಡಿ ಸಮಾಜಮುಖಿ ಕಾರ್ಯಕ್ಕೆ ಪ್ರಶಂಸೆ ವ್ಯಕ್ತಪಡಿಸಿ ಪ್ರಾಣಿ, ಪಕ್ಷಿಗಳಿಗೆ ಯಾವುದೇ ಫಲಾಪೇಕ್ಷೆಯಿಲ್ಲದೇ ಅನೇಕರು ದಾಹ ಇಂಗಿಸುವ ಕೆಲಸ ಮಾಡುತ್ತಿರುವದು ಮಾದರಿಯಾಗಿದೆ. ಮೂಕ ಪ್ರಾಣಿಗಳಿಗೆ ನೀರು ಕೊಡುವದು ಪುಣ್ಯ ಕೆಲಸವಾಗಿದ್ದು ಎಲ್ಲರೂ ಪಕ್ಷಿ,ಪ್ರಾಣಿಗಳಿಗೆ ನೀರು, ಆಹಾರ ಕೊಡುವ ಕೆಲಸ ಮಾಡಬೇಕೆಂದರು. ಈ ಸಂದರ್ಬದಲ್ಲಿ ಆರ್‌ಡಿಎ ಮಾಜಿ ಅಧ್ಯಕ್ಷ ಗೋಪಾಲರೆಡ್ಡಿ, ಶೇಖರವಾರದ, ಎಸ್. ವೆಂಕಟೇಶ ಸೇರಿದಂತೆ ಬಡಾವಣೆಯ ಜನರು ಇದ್ದರು.

# ಸಮಯ ಬಂದಾಗ ಎಲ್ಲವೂ ಗೊತ್ತಾಗುತ್ತದೆ ಹೈಕಮಾಂಡ್ ಮೇಲೆ ಸಂಪೂರ್ಣ ವಿಶ್ವಾಸ



**ಬೆಂಗಳೂರು,ಏ.26**–ಯಾವಾಗ ಏನು ಆಗಬೇಕೋ ಅದು ಆಗುತ್ತದೆ. ಇನ್ನು ಮುಂದೆ ರಾಜಕೀಯ ವಿಚಾರವಾಗಿ ನಾನು ಮಾಧ್ಯಮಗಳ ಮುಂದೆ ಮಾತನಾಡುವುದಿಲ್ಲ. ಸಮಯ ಬಂದಾಗ ತಾನಾಗಿಯೇ ಗೊತ್ತಾಗುತ್ತದೆ ಎಂದು ಉಪಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಸೂಚ್ಯವಾಗಿ ತಿಳಿಸಿದರು.

ದೆಹಲಿಯಿಂದ ವಾಪಸಾಗಿ ಸದಾಶಿವನ ಗರದ ನಿವಾಸದ ಬಳಿ ಮಾತನಾಡಿದ ಅವರು, ನಮ್ಮಲ್ಲಿ ಯಾವುದೇ ಸಮಸ್ಯೆ ಇಲ್ಲ. ಯಾವ ರಾಜಕೀಯವೂ ಇಲ್ಲ. ಏನೇನು ತೀರ್ಮಾನ ಆಗಿವೆಯೋ ಅವು ಚಾಲ್ತಿಗೆ ಬರಲಿವೆ. ನಮ್ಮ ಪಾರ್ಟಿಯಲ್ಲಿ ಯಾವ ಸಮಯದಲ್ಲಿ ಏನು ಮಾಡಬೇಕೋ ಅದನ್ನು ಪಕ್ಷ ಮಾಡುತ್ತದೆ. ನಮಗೆ ನಮ್ಮ ಪಕ್ಷದ ಮೇಲೆ ವಿಶ್ವಾಸ ಇದೆ. ಏನು ಮಾಡಬೇಕು ಎಂಬುದು ಅವರಿಗೆ ಗೊತ್ತಿದೆ ಎಂದು ತಿಳಿಸಿದರು.

ಪಕ್ಷದ ತೀರ್ಮಾನ ಪಾಲಿಸುತ್ತೇವೆ : ನಾಯಕತ್ವ ಬದಲಾವಣೆ ವಿಚಾರವಾಗಿ ಪ್ರತಿಕ್ರಿಯಿಸಿ, ನಿಮಗೆ ಈ ಬಗ್ಗೆ ಗೊಂದಲ ಇರಬಹುದು. ನಾನು ಈ ಬಗ್ಗೆ ಯಾವತ್ತೂ ಚರ್ಚೆ ಮಾಡಲ್ಲ. ಹೈಕಮಾಂಡ್ ಯಾವಾಗ ಯಾವ ಸೂಚನೆ ನೀಡುತ್ತದೆಯೋ ಅವಾಗ ಅದನ್ನು ಪಾಲಿಸುತ್ತೇವೆ ಎಂದು ನಾನು ಹಾಗೂ ಸಿಎಂ ಅವರು ಹೇಳಿದ್ದು, ಅದರಂತೆ ನಡೆಯುತ್ತೇವೆ ಎಂದು ಹೇಳಿದರು.

ಮೇ 15ರಂದು ನನ್ನ ಹುಟ್ಟುಹಬ್ಬಕ್ಕೆ ಯಾರೂ ಫ್ಲೆಕ್ಸ್ ಹಾಗೂ ಬ್ಯಾನರ್‌ಗಳನ್ನು ಹಾಕುವಂತಿಲ್ಲ. ಹಾಕಿದರೆ ಅವರ ➘ 4

### ಡಿ.ಕೆ.ಶಿವಕುಮಾರ ದೆಹಲಿಗೆ ಭೇಟಿಗೆ ಬೇರೆ ಅರ್ಥಬೇಡ

# ಸಚಿವ ಸಂಪುಟ ಪುನರ್ ರಚನೆ ಮಾಹಿತಿಯಿಲ್ಲ-ಯತೀಂದ್ರ



■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.26**–ಪ್ರತಿಯೊಂದು ಪಕ್ಷದಲ್ಲಿಯೂ ಪ್ರತಿಯೊಂದು ಸರ್ಕಾರದಲ್ಲಿಯೂ ಪಕ್ಷದ ಹೈಕಮಾಂಡ್ ಜೊತೆಗೆ ಪಕ್ಷದ ನಾಯಕರು ಭೇಟಿ ಮಾಡುತ್ತಾರೆ. ಡಿಕೆ ಶಿವಕುಮಾರ ಅವರು, ದೆಹಲಿಗೆ ಹೋಗಿರುವುದಕ್ಕೆ ಬೇರೆ ಅರ್ಥ ಕಲ್ಪಿಸುವದು ಬೇಕಿಲ್ಲ ಎಂದು ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ಅವರಿಂದು ಭೇಟಿಯಾದ ಮಾಧ್ಯಮಗಳೊಂದಿಗೆ ಮಾತನಾಡಿ, ಪಕ್ಷದ ಹೈಕಮಾಂಡ ಎಲ್ಲವನ್ನ ಗಮಿಸುತ್ತಿದೆ. ಮುಖ್ಯಮಂತ್ರಿಗಳ ಬದಲಾವಣೆ ಕುರಿತು ಸದನದಲ್ಲಿಯೇ ಸಿಎಂ ಹೇಳಿಯಾಗಿದೆ ಎಂದಷ್ಟೇ ಹೇಳಿದರು.

ಉಪಚುನಾವಣೆ ಬಳಿಕ ಸಚಿವ ಸ್ಥಾನ ➘ 4

# ಉಸುಕು ಹೊಡೆಯುವವರಿಗೆ, ಕ್ಲಬ್ ನಡೆಸೋರೋರಿಗೆ ಅಂಗೆ ಬಿಡ್ತಿರಾ, ಬಡವರ ಹೊಟ್ಟೆ ಮೇಲೆ ಯಾಕೆ ಹೊಡೆತ್ರಿ?

■ ಕನ್ನಡ ಮಾತೃ ಭೂಮಿ ವಾರ್ತೆ

**ಸಿಂಧನೂರು,ಏ.26**–ಉಸುಕು ಹೊಡೆಯುವವರಿಗೆ, ಕ್ಲಬ್ ನಡೆಸೋರರಿಗೆ, ಓಸಿ ಪಟ್ಟಿ ಬರೆಯವರಿಗೆ, ಇಂಟರ್ ನೆಟ್ ಗೇಮ್ ಆಡವರಿಗೆ ಬಿಟ್ಟು ಬಿಡ್ತಿರಿ, ಸಣ್ಣ ಪುಟ್ಟ ಕೆಲಸ ಮಾಡೋವರಿಗೆ ಯಾಕೆ? ಹೊಟ್ಟೆ ಮೇಲೆ ಹೊಟ್ಟೆ ಹೊಡಿತಿರಿ ಎಂದು ಬಿಜೆಪಿ ಮುಖಂಡ ಕೆ.ಕರಿಯಪ್ಪ ಕೇಳಿದ ಪ್ರಶ್ನೆಗೆ ಸಂಚಾರಿ ಠಾಣೆಯ ಪೊಲೀಸರು ಉತ್ತರಿಸದೇ ತಬ್ಬಿಬ್ಬಾಗಿದ್ದಾರೆ.

ಸಂಚಾರಿ ಠಾಣೆಯ ಪೊಲೀಸ್ ಪೇದೆಯೊಬ್ಬರು ವಾಹನ ಸವಾರರೊಬ್ಬರಿಗೆ ಥಳಿಸಿದ ಘಟನೆಗೆ ಸಂಬಂಧಿಸಿದಂತೆ ಸಾರ್ವಜನಿಕ ಆಸ್ಪತ್ರೆಗೆ ಭೇಟಿ ನೀಡಿ, ಗಾಯಗೊಳಗಾದ ವಾಹನ ಸವಾರಿಗೆ ಬಿಜೆಪಿ ಮುಖಂಡ ಕೆ.ಕರಿಯಪ್ಪ ಆರೋಗ್ಯ ವಿಚಾರಣೆ ನಡೆಸಿ, ನಂತರ ಆಸ್ಪತ್ರೆಗೆ ಧಾವಿಸಿದ ಟ್ರಾಫಿಕ್ ಪೊಲೀಸರಿಗೆ ತರಾಟೆ ತೆಗೆದುಕೊಂಡ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದು, ನಗರ ಸೇರಿದಂತೆ ತಾಲ್ಲೂಕಿನಾದ್ಯಂತ ನಡೆಯುವ ಅಕ್ರಮ ಚಟುವಟಿಕೆಗಳ ಕುರಿತು ಬಿಜೆಪಿ ಮುಖಂಡ ಕೆ.ಕರಿಯಪ್ಪ ಎಳೆ ಎಳೆಯಾಗಿ ಬಿಚ್ಚಿಟ್ಟಾರೆ.



**ಕೆ.ಕರಿಯಪ್ಪ ಪ್ರಶ್ನೆಗೆ ತಬ್ಬಿಬ್ಬಾದ ಟ್ರಾಫಿಕ್ ಪೊಲೀಸರು**

ವಿಡಿಯೋದಲ್ಲಿನಿದೇ?: ಸಿಂಧನೂರಾಗ ಕಂಡಂಗೆ ಅಕ್ರಮ ದಂಧೆ ನಡೆದಿದೆ. ನಿಮ್ ಡಿಪಾರ್ಟ್ಮೆಂಟ್ ನವರು ಕಂಡಂಗಾ ರೊಕ್ಕ ವಸೂಲಿ ಮಾಡ್ತಿರಿ., ಜೊತೆಗೆ ಎಲ್ಲಿ ಬೇಕಾದಲ್ಲಿ ನಿಂತು ಐವತ್ತು., ನೂರು ರೂಗೆ ಯಾಕೆ ಕೈ ಚಾಚ್ತಿರಿ ಎಂದು ಹಿಗ್ಗಾಮುಗ್ಗವಾಗಿ ಛಾಡಿಸಿದ್ದಾರೆ. ಕೇಸ್ ಹಾಕಲೇ ಬೇಕೆಂದರೆ ಎಂಎಲ್‌ಎ, ಎಂಪಿ ಸೇರಿ ನಮ್ಮಂತ ದೊಡ್ಡವರ ಮೇಲೆ ಮಾಡಿ, ಯಾವನು ಅಕ್ರಮದಲ್ಲಿ ತೊಡಗಿದ್ದಾನೆ ಅಂತವರ ಮೇಲೆ ಮಾಡಿ ಎಂದ ಕರಿಯಪ್ಪ, ಸಣ್ಣ ಪುಟ್ಟ ರೈತರಿಗೆ, ರಿಕ್ಷಾ, ಆಟೋ ಹೊಡೆಯವರ ಮೇಲೆ ದೌರ್ಜನ್ಯ ಮಾಡಿ ಅಂತಹವರ ಮೇಲೆ ಕೇಸ್ ಮಾಡ್ತಿರಿ ನಾಳೆ ದಿನಾ ಹೆಚ್ಚು ಕಮ್ಮಿ ಆಗಿ ಆತ್ಮಹತ್ಯೆಗೆ ಯತ್ನಿಸಿದ್ರೆ ಜವಾಬ್ದಾರಿ ಯಾರೂ? ಎಂದು ಖಾರವಾಗಿ ತಮ್ಮದೇ ಸ್ಟೈಲ್ ನಲ್ಲಿ ಪ್ರಶ್ನಿಸಿದ್ದಾರೆ. ಇದಕ್ಕೆ ಉತ್ತರಿಸದ ಟ್ರಾಫಿಕ್ ಪೊಲೀಸರು ಮೌನಂ ಸಮ್ಮತಿ ಲಕ್ಷಣಂ ಎನ್ನುವ ಮೂಲಕ ಸುಮ್ಮನಿರುವ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ಸಾಕಷ್ಟು ವೈರಲ್ ಆಗಿದ್ದು, ಚರ್ಚೆಗೆ ಗ್ರಾಸವಾಗಿದೆ.

## ಕಸಾಪ ಜಿಲ್ಲಾಧ್ಯಕ್ಷ ಸ್ಥಾನಕ್ಕೆ ಮಹಿಳೆಯರು ಸ್ಪರ್ಧಿಸಲಿ-ರೇಖಾ ಬಡಿಗೇರ್

■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು, ಏ. 26**–ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷರ ಚುನಾವಣೆ ಹತ್ತಿರ ಬರುತ್ತಿದ್ದು ಈ ಬಾರಿ ಜಿಲ್ಲಾಧ್ಯಕ್ಷ ಸ್ಥಾನಕ್ಕೆ ಜಿಲ್ಲೆಯ ಮಹಿಳೆಯರು ಸ್ಪರ್ಧೆ ಮಾಡಲಿ ಎಂದು ಸಾಹಿತಿ ರೇಖಾ ಬಡಿಗೇರ್ ಮಹಿಳೆಯರಲ್ಲಿ ಮನವಿ ಮಾಡಿದ್ದಾರೆ.

ಈ ಕುರಿತು ಶುಕ್ರವಾರ ಪ್ರಕಟಣೆ ನೀಡಿರುವ ಅವರು, ಜಿಲ್ಲೆ, ರಾಜ್ಯಮಟ್ಟದಲ್ಲಿ ಹೆಸರು ಮಾಡಿದ ಅನೇಕ ಮಹಿಳಾ ಸಾಹಿತಿಗಳಿದ್ದಾರೆ. ಅಲ್ಲದೇ ಕಸಾಪದಲ್ಲಿ ಇದುವರೆಗೆ ಜಿಲ್ಲೆಯ ಮಹಿಳೆಯರಿಗೆ ತಾಲೂಕು ಅಧ್ಯಕ್ಷ ಸ್ಥಾನ ಅಥವಾ ಪದಾಧಿಕಾರಿಗಳ ಸ್ಥಾನಕ್ಕಷ್ಟೇ ಸೀಮಿತಗೊಳಿಸುತ್ತಾ ಬರಲಾಗಿದೆ. ನಾಮಕೇವಾಸ್ತೆ ನೇಮಕ ಮಾಡುವುದು ನಡೆಯುತ್ತಿದೆ.

ಜಿಲ್ಲಾಧ್ಯಕ್ಷ ಚುನಾವಣೆಗೆ ಪುರುಷರೇ ಸ್ಪರ್ಧೆ ಮಾಡುತ್ತಿರುವುದು ಕಂಡುಬರುತ್ತಿದೆ. ಈ ಹಿನ್ನೆಲೆ ಈ ಬಾರಿ ಹೆಚ್ಚಿನ ಸಂಖ್ಯೆಯ ಮಹಿಳೆಯರೂ ಸ್ಪರ್ಧೆ ಗಿಳಿಯಬೇಕಿದೆ.

ಮಹಿಳೆಯರು ಜಿಲ್ಲಾಧ್ಯಕ್ಷರಾದಾಗ ಜಿಲ್ಲೆಯಲ್ಲಿ ಮಹಿಳೆಯರಿಗೂ ಒಂದು ಉನ್ನತ ಸ್ಥಾನಮಾನ ದೊರೆಯಲಿವೆ.

ಹಾಗಾಗಿ, ಮಹಿಳೆಯರೂ ಸಾಹಿತ್ಯ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿ ಬರಬೇಕಿದೆ ಎಂದಿದ್ದಾರೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸುವ ಹಕ್ಕು ಪ್ರತಿಯೊಬ್ಬ ಮಹಿಳೆಯರಿಗೂ ಇದೆ.

ರಾಜ್ಯದಲ್ಲಿ ಬೇರೆ ಬೇರೆ ಜಿಲ್ಲೆಯಲ್ಲಿ ಈಗಾಗಲೇ ಜಿಲ್ಲಾಧ್ಯಕ್ಷರು ಮಹಿಳೆಯರು ಇದ್ದಾರೆ. ಹಾಗಾಗಿ , ಈ ಬಾರಿ ನಡೆಯುವ ಚುನಾವಣೆಯಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿಗೆ ಜಿಲ್ಲೆಯ ಮಹಿಳೆಯರು ಜಿಲ್ಲಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧೆ ಮಾಡಲಿ ಎಂದು ಕಲಾ ಸಂಕುಲ ಸಂಸ್ಥೆ ಅಧ್ಯಕ್ಷೆ, ಲೇಖಕಿ, ಉಪನ್ಯಾಸಕಿಯೂ ಆಗಿರುವ ರೇಖಾ ಬಡಿಗೇರ್ ತಿಳಿಸಿದ್ದಾರೆ.

## ಶ್ರೀವಾಸವಿಜಯಂತಿ: ಪಲ್ಲಕ್ಕಿ ಸೇವೆ, ವಿಶೇಷ ಅಲಂಕಾರ-ಡಾ.ಶಿವರಾಜ ಪಾಟೀಲ್‌ರಿಂದ ಪೂಜೆ



■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.26**–ಶ್ರೀ ವಾಸವಿ ಜಯಂತಿ ಅಂಗವಾಗಿ ಆರ್ಯವೈಶ್ಯ ಸಮಾಜದಿಂದ ಅದ್ದೂರಿ ಮೆರವಣಿಗೆ ನಡೆಸಲಾಯಿತು. ಶ್ರೀ ನಗರೇಶ್ವರ ದೇವಸ್ಥಾನದಿಂದ ಪ್ರಾರಂಭವಾದ ಶ್ರೀ ವಾಸವಿ ಮಾತಾ ಪಲ್ಲಕ್ಕಿ ವಿಶೇಷ ಪೂಜೆ ಸಲ್ಲಿಸಲಾಯಿತು.

ನಗರದ ಶಾಸಕ ಡಾ.ಶಿವರಾಜ ಪಾಟೀಲ್ ಎರಡು ಕೈಗಳಲ್ಲಿ ತೆಂಗಿನಕಾಯಿ ಕರ್ಪೂರ ದೀಪ ಬೆಳಗಿಸಿ ಚಾಲನೆ ನೀಡಿದರು. ಪಲ್ಲಕ್ಕಿಸೇವೆಯೊಂದಿಗೆ ಸುವರ್ಣ, ಬೆಳ್ಳಿ ರಥೋತ್ಸವ, ತೊಟ್ಟಿಲು ಸೇವೆಗಳು ನಡೆದವು. ಆ ರ್ಯವೈಶ್ಯ ಸಮಾಜದ ಅಧ್ಯಕ್ಷ ಪುರುಷೋತ್ತಮ ಸಾವಿತ್ರಿ, ಕಾರ್ಯದರ್ಶಿ ಪದ್ಮರಾಜ, ಕಡಗೋಳು ಆಂಜಿನೇಯ್ಯ, ಗಾಣಧಾಳ ಲಕ್ಷ್ಮೀಪತಿ, ಜಟ್ರಂ ಶ್ರೀನಿವಾಸ, ಬಿ.ಗೋವಿಂದ, ಕೆ.ಸಿ.ವೀರೇಶ, ಚ್ಯಾಗಿ ವೆಂಕಟೇಶ, ದೇವನಪಲ್ಲಿ ವೆಂಕಣ್ಣ ಶೆಟ್ಟಿ ಸೇರಿದಂತೆ ಸಮಾಜ ಗಣ್ಯರು, ಮಹಿಳೆಯರು ಭಾಗವಹಿಸಿದ್ದರು.

### ಬಂಡಾಯ ಸಂಘಟನೆಯಿಂದ ವಿಚಾರ ಗೋಷ್ಟಿ,ಕವಿಗೋಷ್ಟಿ

## ಬಂಡಾಯ ಏಳದಿದ್ದರೆ ಏಕ ಸಂಸ್ಕೃತಿ ಹೇರುವ ಅಪಾಯ-ಅಲ್ಲಪ್ಪ ಪ್ರಭು ಬೆಟ್ಟದೂರು

■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.26**–ಹಳೆ ತಲೆಮಾರಿನ ಮುದುಕರು ಕ್ರೀಡಾಂಗಣದಲ್ಲಿ, ಹೊಸತಲೆಮಾರಿನ ಯುವಕ ಯುವತಿಯರು ಮೊಬೈಲ್ ಅಂಗಳದಲ್ಲಿ ಮಾರುಹೋಗಿದ್ದಾರೆ ಇದು ವಸ್ತು ಸ್ಥಿತಿಯಾಗಿದ್ದು ಬಂಡಾಯದ ಸಾಹಿತ್ಯದ ಕಡೆಗೆ ಒಲವು ಮೂಡಿಸಲು ಮಾರ್ಗದರ್ಶನ ಮೂಲಕ ಕರೆದುಕೊಂಡು ಹೋಗುವ ಕೆಲಸ ಆಗಬೇಕಿದೆ ಎಂದು ಹಿರಿಯ ಸಾಹಿತಿ ಅಲ್ಲಮಪ್ರಭು ಪಾಟೀಲ್ ಬೆಟ್ಟದೂರು ಹೇಳಿದರು.

ಅವರಿಂದು ನಗರದ ಕನ್ನಡ ಭವನದಲ್ಲಿ ಬಂಡಾಯ ಸಾಹಿತ್ಯ ಸಂಘಟನೆ 50ನೇ ವರ್ಷದ ಹಿನ್ನೆಲೆ ಬಂಡಾಯ ಸಾಹಿತ್ಯ ಹೊಸತಲೆ ಮಾರು ಅಂಗವಾಗಿ ಹಮ್ಮಿಕೊಂಡ ಒಂದುದಿನ ವಿಚಾರ ಸಂಕಿರಣ ಮತ್ತು ಕವಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು,

1977 ಮಾ.11 ರಂದು ಬಂಡಾಯ ಸಾಹಿತ್ಯ ಪ್ರಾರಂಭವಾಯಿತು, ಅಂದಿನ ಸಾಹಿತ್ಯ ಸಮ್ಮೇಳನದಲ್ಲಿ ದಲಿತಗೋಷ್ಠಿಯನ್ನಿಡಲು ಅಂದಿನ ಸಾಹಿತಿಗಳಾದ





ಬೋಳಬಂಡೆಪ್ಪ, ಸೇರಿದಂತೆ ಅನೇಕರು ಹೋರಾಟ ನಡೆಸಿದರು, ಅಂದು ಬಂಡಾಯ ಸಾಹಿತ್ಯ ಹುಟ್ಟಿತು, ಆ ಕಾಲದ ಬಂಡಾಯ ಸಾಹಿತ್ಯಕ್ಕೂ ಈಗಿನ ಬಂಡಾಯ ಸಾಹಿತ್ಯಕ್ಕೂ ಸಾಕಷ್ಟು ಬದಲಾವಣೆ ಇವೆ, ನಾವು ಅಂದು ಯುವಕರಾಗಿದ್ದ ವೇಳೆ ಚಳುವಳಿಗಳನ್ನು ನಡೆಸಲು ಮುಂದೆ ಇದ್ದೆವು, ಇಂದಿನ ಯುವ ➘ 4

# ಬಯಲು ಆಂಜನೇಯ ದೇವಸ್ಥಾನದಲ್ಲಿ ಶ್ರೀ ಶಾಮ ಸುಂದರ ದಾಸರ ಆರಾಧನೆ



■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.26**–ಜವಾಹರ ನಗರದ ಬಯಲು ಆಂಜನೇಯ ದೇವಸ್ಥಾನದಲ್ಲಿ ನಿನ್ನೆ ಸಂಜೆ ವರಕವಿಗಳು ದಾಸ ಶ್ರೇಷ್ಠರಾದ ಶ್ರೀ ಶಾಮಸುಂದರ ದಾಸರ ಆರಾಧನೆಯನ್ನು ದಾಸರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ವಿಜ್ರಂಭಣೆಯಿಂದ ಆಚರಿಸಲಾಯಿತು.

ಆರಾಧನೆಯ ಕಾರ್ಯಕ್ರಮದಲ್ಲಿ ಉಪನ್ಯಾಸಗಳು ದಾಸವಾಣಿ ಕಾರ್ಯಕ್ರಮಗಳು ಭಜನಾ ಮಂಡಳಿಯಿಂದ ಭಜನೆ ಕಾರ್ಯಕ್ರಮಗಳು ಜರಗಿದವು. ಶೃತಿ ಸಾಹಿತ್ಯ ಮೇಳ ರಾಯಚೂರು ಇದರ ಅಧ್ಯಕ್ಷ ಮುರಳಿಧರ ಕುಲಕರ್ಣಿ ಅವರು ಉಪನ್ಯಾಸ ನೀಡಿ ಶ್ರೀ ಶಾಮ ಸುಂದರ ದಾಸರು ಮಾನವೀಯ ಗುಂಡಾಚಾರ್ಯರೆಂದು ➘ 4

# ವಿಧಾನ ಪರಿಷತ್ ಸದಸ್ಯ ಎ.ವಸಂತಕುಮಾರರಿಂದ ವಿವಿದ ಅಭಿವೃದ್ದಿ ಕಾಮಗಾರಿಗಳಿಗೆ ಚಾಲನೆ

■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.26**–ನಗರ ವಿಧಾನ ಸಭಾ ಕ್ಷೇತ್ರದ ಬಾಯಿದೊಡ್ಡಿ ಗ್ರಾಮದಲ್ಲಿ ಕೆಕೆಆರ್ ಡಿಬಿ ಅನುದಾನದಲ್ಲಿ ಸಿಸಿ ರಸ್ತೆ ಕಾಮಗಾರಿ ಹಾಗೂ ವಾರ್ಡ 21 ರಲ್ಲಿ ಗಾರ್ಡನ ಅಭಿವೃದ್ಧಿ ಕಾಮಗಾರಿಗೆ ವಿಧಾನ ಪರಿಷತ್ ಸದಸ್ಯ ಎ.ವಸಂತಕುಮಾರ ಅವರು ಭೂಮಿ ಪೂಜೆ ನಡೆಸಿದರು.

ಬಾಯಿದೊಡ್ಡಿ ಗ್ರಾಮದಲ್ಲಿ ಕೆಕೆಆರ್ ಡಿಬಿಯ 30 ಲಕ್ಷ ರೂ ಅನುದಾನದಲ್ಲಿ ಸಿಸಿ ರಸ್ತೆ ನಿರ್ಮಾಣ ಮಾಡಲು ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಎ.ವಸಂತಕುಮಾರ ಅವರು ಇಂದಿಗೂ ನಗರ ವಿಧಾನ ಸಭಾ ಕ್ಷೇತ್ರದ ಗ್ರಾಮೀಣ ಭಾಗದಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಸಾಕಷ್ಟು ಇದ್ದು, ನಾಗರೀಕರಿಗೆ ರಸ್ತೆ, ಚರಂಡಿ, ಕುಡಿಯುವ ನೀರು ಒದಗಿಸುವದು ನಮ್ಮ ಸರಕಾರದ ಜವಾಬ್ದಾರಿಯಾಗಿದೆ ಎಂದು ಹೇಳಿದರು. ಇನ್ನೂ ಹಚ್ಚಿನ ಸೌಲಭ್ಯ ಒದಗಿಸಲು ಪ್ರಯತ್ನಿಸಲಾಗುವದು ಎಂದು ಹೇಳಿದರು.

ಈ ಸಂದರ್ಭದಲ್ಲಿ ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಅಬ್ದುಲ ಕರೀಮ, ಯೋಜನಾ ಆಯೋಗದ



ಸದಸ್ಯ ಡಾ.ರಝಾಕ ಉಸ್ತಾದ, ಜೆ.ಸತ್ಯನಾಥ, ದೀಪಕ ರೆಡ್ಡಿ, ಜಿ.ಆನಂದ ರೆಡ್ಡಿ, ಮೊಹಮ್ಮದ ಉಸ್ಮಾನ, ಸೈಯದ ಸುಲ್ತಾನ, ಮೊಹಮ್ಮದ ರಫಿ, ಬಿ.ಮಲ್ಲೇಶ, ಜಿ.ಶಿವಪ್ಪ, ಕುರುಬ ಜಯಪ್ಪ, ಕುಂಬಾರ ರಂಗಪ್ಪ, ಕುಂಬಾರ ಸೋಮಪ್ಪ, ಕುರುಬರ ಸಿದ್ದಪ್ಪ, ಎಸ್.ಹನುಂತರೆಡ್ಡಿ, ಜಿ.ಅಂಜನರೆಡ್ಡಿ, ಎಸ್.ಗೋವಿಂದ ಹಾಗೂ ಇತರರು ಉಪಸ್ಥಿತರಿದ್ದರು.



**ವಾರ್ಡ ನಂ 21ರ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ :** ನಂತರ ನಗರ ವಿಧಾನ ಸಭಾ ಕ್ಷೇತ್ರದ ವಾರ್ಡ ನಂ 21ರ ಕೃಷ್ಣ ದೇವರಾಯ ಕಾಲೋನಿಯ ಬಿಲ್ವ ಮಂದಿರ ಗಾರ್ಡನ್ ಅಭಿವೃದ್ಧಿಗೆ ಕೆಕೆಆರ್‌ಡಿಬಿ ಅನುದಾನದ ಕಾಮಗಾರಿಗೆ ವಿಧಾನ ಪರಿಷತ್ ಸದಸ್ಯ ಎ.ವಸಂತಕುಮಾರ ಅವರು ಭೂಮಿ ಪೂಜೆ ನಡೆಸಿದರು.

ವಾರ್ಡ ನಂ.21ರ ಕೃಷ್ಣ ದೇವರಾಯ ಕಾಲೋನಿಯ ಬಿಲ್ವ ಮಂದಿರ ಗಾರ್ಡನ್ ಅಭಿವೃದ್ಧಿಗೆ ಕೆಕೆಆರ್‌ಡಿಬಿ ಯ 30 ಲಕ್ಷ ರೂ ಅನುದಾನದಲ್ಲಿ ಅಭಿವೃದ್ಧಿ ಪಡಿಸಲು ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಎ.ವಸಂತಕುಮಾರ ಅವರು ಇಂದಿಗೂ ನಗರ ವಿಧಾನ ಸಭಾ ಕ್ಷೇತ್ರದ ಹಲವಾರು ಬಡಾವಣೆಗಳಲ್ಲಿ ಇರುವ ಗಾರ್ಡನಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಸಾಕಷ್ಟು ಇದ್ದು, ನಾಗರೀಕರಿಗೆ ವಾಯು ವಿಹಾರ, ಮಕ್ಕಳಿಗೆ ಆಡಲು ಸೂಕ್ತ ಸೌಲಭ್ಯ ಒದಗಿಸುವದು ನಮ್ಮ ಸರಕಾರದ ಜವಾಬ್ದಾರಿಯಾಗಿದೆ ಎಂದು ಹೇಳಿದರು. ➘ 4

# ಸಿಡಿಲು ಅಪಾಯದಿಂದ ರಕ್ಷಣೆಗಾಗಿ ಮುಂಜಾಗ್ರತಾ ಕ್ರಮ ಪಾಲಿಸಿ - ಡಿಸಿ ಶಿಲ್ಪಾ ಶರ್ಮಾ

ಕನ್ನಡ ಮಾತೃ ಭೂಮಿ ವಾರ್ತೆ



**ಬೀದರ್,ಏ.26-**ಗುಡುಗು ಹಾಗೂ ಸಿಡಿಲು ಬಡಿತ ದಿಂದ ಉಂಟಾಗುವ ಅಪಾಯಗಳನ್ನು ತಗ್ಗಿಸಲು ರಾಷ್ಟ್ರೀಯ ವಿಪತ್ತು ನಿರ್ವ ಹಣಾ ಪ್ರಾಧಿಕಾರ ನೀಡಿರುವ ಸಲಹೆ ಗಳನ್ನು ಸಾರ್ವಜನಿಕರು ಕಡ್ಡಾಯವಾಗಿ ಪಾಲಿಸಬೇಕು ಎಂದು ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಮನವಿ ಮಾಡಿದ್ದಾರೆ.

ಜಿಲ್ಲೆಯಲ್ಲಿ ಮುಂಗಾರು ಪೂರ್ವ ಹಾಗೂ ಮುಂಗಾರು ಅವಧಿಯಲ್ಲಿ ಗುಡುಗು-ಸಿಡಿಲು ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತದೆ. ವಿಶೇಷವಾಗಿ ಮಧ್ಯಾಹ್ನ ಮತ್ತು ಸಂಜೆ ವೇಳೆಯಲ್ಲಿ ಸಿಡಿಲು ಸಂಭವಿಸುವ ಸಾಧ್ಯತೆ ಹೆಚ್ಚು ಇರುವುದರಿಂದ ಸಾರ್ವಜನಿಕರು ಎಚ್ಚರಿಕೆಯಿಂದಿರಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೊರಗೆ ಹೋಗುವ ಅನಿವಾರ್ಯತೆ ಇದ್ದಲ್ಲಿ ಹವಾಮಾನ ಮುನ್ಸೂಚನೆಗಳನ್ನು ಪರಿಶೀಲಿಸಿ, Common Alerting Protocol (CAP) ಮೂಲಕ ಮೊಬೈಲ್‌ಗೆ ಬರುವ ಎಚ್ಚರಿಕೆ ಸಂದೇಶಗಳನ್ನು ಗಮನಿಸಬೇಕು. ಪ್ರತಿಕೂಲ ಹವಾಮಾನ ಸಮಯದಲ್ಲಿ ಮನೆಯಿಂದ ಹೊರಗೆ ಹೋಗುವುದನ್ನು ತಪ್ಪಿಸುವುದು ಸೂಕ್ತ. ಲೋಹದ ಮೇಲ್ಛಾವಣಿಯ ಮನೆಗಳು ಸುರಕ್ಷಿತವಾಗಿರದ ಕಾರಣ ದೃಢವಾದ ಕಟ್ಟಡಗಳಲ್ಲಿ ಆಶ್ರಯ ಪಡೆಯಬೇಕು.

ಬೆಟ್ಟಗಳು, ಪರ್ವತ ಪ್ರದೇಶಗಳು ಮತ್ತು ಎತ್ತರದ ಸ್ಥಳಗಳನ್ನು ತಪ್ಪಿಸಿ, ಸುರಕ್ಷಿತ ತಗ್ಗು ಪ್ರದೇಶಗಳಲ್ಲಿ ಆಶ್ರಯ ಪಡೆಯಬೇಕು. ಕೆರೆ, ನದಿ ಸೇರಿದಂತೆ ನೀರಿನ ಮೂಲಗಳಿಂದ ದೂರವಿರಬೇಕು. ವಿದ್ಯುತ್ ಕಂಬಗಳು, ಮೊಬೈಲ್ ಟರ್ವ, ರೈಲು ಹಳಿಗಳು ಮತ್ತು ಪವನ ವಿದ್ಯುತ್ ಗೋಪುರಗಳ ಸಮೀಪ ನಿಲ್ಲಬಾರದು.

ವಾಹನದಲ್ಲಿ ಪ್ರಯಾಣಿಸುತ್ತಿದ್ದರೆ ತಕ್ಷಣವೇ ವಾಹನ ನಿಲ್ಲಿಸಿ ಅದರೊಳಗೇ ಸುರಕ್ಷಿತವಾಗಿರಬೇಕು. ಗುಂಪಿನಲ್ಲಿ ಇದ್ದರೆ ಪರಸ್ಪರ ಅಂತರ ಕಾಪಾಡಿಕೊಳ್ಳಬೇಕು. ಹೊರಾಂಗಣದಲ್ಲಿ ಇದ್ದಾಗ ಆಶ್ರಯ ದೊರೆಯದ ಪರಿಸ್ಥಿತಿಯಲ್ಲಿ ಎರಡು ಕಾಲುಗಳನ್ನು ಜೋಡಿಸಿ ಮಂಡಿಯೂರಿ ಕುಳಿತು ತಲೆಯನ್ನು ಬಾಗಿಸಿ ಕಿವಿಗಳನ್ನು ಮುಚ್ಚಿಕೊಳ್ಳುವುದು ಸುರಕ್ಷಿತ ಕ್ರಮವಾಗಿದೆ. ಮರಗಳ ಕೆಳಗೆ ಆಶ್ರಯ ಪಡೆಯುವುದನ್ನು ತಪ್ಪಿಸಬೇಕು.

**ಸಿಡಿಲು ಆಪ್' ಬಳಕೆ ಉಪಯುಕ್ತ :**

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದಿಂದ ಪರಿಚಯಿಸಲಾದ ಸಿಡಿಲು' ಮೊಬೈಲ್ ಆಪ್ ಮೂಲಕ ಮಳೆ, ಸಿಡಿಲು ಸೇರಿದಂತೆ ಹವಾಮಾನ ವೈಪರಿತ್ಯಗಳ ಬಗ್ಗೆ ಮುಂಚಿತ ಮಾಹಿತಿ ಪಡೆಯಬಹುದು. ಸ್ಥಳಾಧಾರಿತ ಮಾಹಿತಿ ನೀಡುವ ಈ ಆಪ್ ಬಳಕೆದಾರರಿಗೆ ಅಪಾಯದ ಮುನ್ನೆಚ್ಚರಿಕೆ ನೀಡುವ ಮೂಲಕ ಜೀವ ಹಾನಿಯನ್ನು ತಡೆಯಲು ಸಹಾಯಕವಾಗಿದೆ.

ಸಾರ್ವಜನಿಕರು ಈ ಎಲ್ಲ ಮುಂಜಾಗ್ರತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಮೂಲಕ ಸಿಡಿಲಿನಿಂದಾಗುವ ಅಪಾಯಗಳನ್ನು ತಪ್ಪಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಮನವಿ ಮಾಡಿದ್ದಾರೆ.

# ದೇವಸ್ಥಾನ ಮತ್ತು ಜಮೀನು ಕಬಳಿಕೆ ಯತ್ನ: ಪರಿಷತ್ ಸದಸ್ಯ ಬಿ.ಜಿ. ಪಾಟೀಲ್ ಟ್ರಸ್ಟ್ ವಿರುದ್ಧ ಆರೋಪ

ಕನ್ನಡ ಮಾತೃ ಭೂಮಿ ವಾರ್ತೆ



**ಕಲಬುರ್ಗಿ, ಏ.26-** ನಗರದ ಬಡೇಪೂರ್ ಗ್ರಾಮದ ಸರ್ವೆ ನಂಬರ್ 82/2ರಲ್ಲಿ ಸುಳ್ಳು ದಾಖಲೆಗಳ ಮೂಲಕ ರಾಜ್ಯ ವಿಧಾನ ಪರಿಷತ್ ಸದಸ್ಯ ಡಾ. ಬಿ.ಜಿ. ಪಾಟೀಲ್ ಅವರ ನೇತೃತ್ವದ ಟ್ರಸ್ಟ್ ದೇವಸ್ಥಾನ ಮತ್ತು ಜಾಗವನ್ನು ಒತ್ತುವರಿ ಮಾಡಿಕೊಳ್ಳುತ್ತಿದೆ ಎಂದು ಸಂತ್ರಸ್ತ ವೀರೇಶ್ ನಗರದ ನಿವಾಸಿ ಸಂತೋಷ್ ತಂದೆ ಭೀಮರಾವ್ ಖಾನಾಪೂರ್ ಅವರು ಆರೋಪಿಸಿದರು.

ನಗರದ ಪತ್ರಿಕಾ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾ ರೆಡ್ ಕ್ರಾಸ್ ಸಂಸ್ಥೆಯ ಅಧ್ಯಕ್ಷ ಅರುಣಕುಮಾರ್ ಧಾರಕದಾಸ್ ಲೋಯಾ, ಮಧುಸೂಧನ್ ಮಾಲು, ಪ್ರವೀಣ್ ಪಿ. ನಂದಿ, ಅರವಿಂದ್ ಸಂಗಾಪುರ, ಮಹಾನಗರ ಪಾಲಿಕೆಯ ಮಾಜಿ ಸದಸ್ಯ ಉಮೇಶ್ ಶೆಟ್ಟಿ ಅವರು ಒತ್ತುವರಿ ಮಾಡಿಕೊಳ್ಳುತ್ತಿದ್ದು, ಅವರಿಗೆ ಸಂಬಂಧಪಟ್ಟ ಇಲಾಖೆಯವರು ಸಾತ್ ನೀಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಡೇಪೂರ್ ಗ್ರಾಮದ ಸರ್ವೆ ನಂ. 82/2ರಲ್ಲಿ ಖಾನಾಪೂರ ಆದಿ ಶಿವಶಕ್ತಿ ಮಂದಿರ ಟ್ರಸ್ಟ್ ಮಾಡಲು ಕಳೆದ 2025ರ ನವೆಂಬರ್ 18ರಂದು ಅರ್ಜಿ ಸಲ್ಲಿಸಲಾಗಿತ್ತು. ಆದರೆ ತಹಸಿಲ್ದಾರರು ಸರ್ವೆ ನಂ. 82/2ರ ಎಲ್ಲ ಮೂಲ ದಾಖಲೆಗಳನ್ನು ನೀಡಿದರು ಕೂಡಾ ಅವರು ಹಿಂಬರಹ ನೀಡಿ, 26/402ರಲ್ಲಿ ಸ್ಮಶಾನ ಹನುಮಾನ್ ಮಂದಿರ ಟ್ರಸ್ಟನ ಅರುಣುಕುಮಾರ್ ಲೋಯಾ ಹೇಳಿಕೆಯಂತೆ ಸುಮಾರು 50 ವರ್ಷಗಳ ಹಿಂದೆ ದೇವಸ್ಥಾನ ನೊಂದಣಿಯಾಗಿದೆ ಎಂದು ಹೇಳಿ ಪ್ರಾಧಿಕಾರದಲ್ಲಿ ಮೇಲ್ಮನವಿ ಸಲ್ಲಿಸಿ ಎಂದು ತಿಳಿಸಿದ್ದರು. ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ತಹಸಿಲ್ದಾರರು ಯಾರ ಹೆಸರಿನಲ್ಲಿ ನಮೂದಿಸದೆ ಜಾಣತನ ಮೆರೆದು ಅದನ್ನು ರದ್ದುಪಡಿಸಲು ಸಾಧ್ಯವಿಲ್ಲವೆಂದು ಬರೆದರು ಎಂದು ಅವರು ಹೇಳಿದರು.

ಆದಾಗ್ಯೂ, ನಾವು ಅವರಿಗೆ ಮನವಿ ಸಲ್ಲಿಸುವ ಉದ್ದೇಶವು ಸರ್ವೆ ನಂ. 82/2ರಲ್ಲಿ ಟ್ರಸ್ಟ್ ರಜಿಸ್ಟರ್ ಮಾಡಲು ಅನುಮತಿ ನೀಡಬೇಕು, ಜೊತೆಗೆ ಪ್ರತಿವಾದಿಯ ಮೂಲ ದಾಖಲೆಗಳನ್ನು ಪರಿಶೀಲಿಸಿ ಕ್ರಮಕ್ಕೈಗೊಳ್ಳಲು ಕೇಳಿಕೊಂಡರೂ ಸಹ ಅದನ್ನು ನಿರ್ಲಕ್ಷಿಸಿ ಮತ್ತು ಸರ್ಕಾರಿ ಜಮೀನು ಅಕ್ರಮ ಉಪಯೋಗ ಗಮನಿಸಿದರೂ ಉದ್ದೇಶಪೂರ್ವಕವಾಗಿ ಮೇಲ್ಮನವಿ ಸಲ್ಲಿಸಲು ತಿಳಿಸಿದರು ಹಾಗೂ ಸರ್ವೆ ನಂ. 81/2 ಸರ್ಕಾರಿ ಜಮೀನಾಗಿದ್ದು, ಅಲ್ಲಿ ಸ್ಮಶಾನ ಹನುಮಾನ್ ಮಂದಿರ ಟ್ರಸ್ಟ್ ರಚಿಸಿದ್ದಾರೆ ಎನ್ನುವುದಕ್ಕೆ ಉತ್ತರ ನೀಡಿಲ್ಲ. 2003ರ ಜನವರಿ 3ರಂದು ತಹಸಿಲ್ದಾರರು ನೀಡಿದ ಹಿಂಬರಹದಲ್ಲಿ ಸ್ಮಶಾನ್ ಹನುಮಾನ್ ಮಂದಿರ ಟ್ರಸ್ಟ್ ಸೇಡಂ ರಸ್ತೆ ಮುಂತಾಖಾಬಿ ವಹಿಯಲ್ಲಿ ನೊಂದಣಿ ಇರುವುದಿಲ್ಲವೆಂದು ತಿಳಿಸಿದ್ದಾರೆ. ಈ ಕುರಿತು ಮಾಹಿತಿ ಹಕ್ಕು ಕಾಯ್ದೆಯಲ್ಲಿ ಕೇಳಿದ ದಾಖಲೆಗಳನ್ನು ಕೊಡುತ್ತಿಲ್ಲ ಎಂದು ಅವರು ಆರೋಪಿಸಿದರು.

ಆದಾಗ್ಯೂ, ಹಿರಿಯ ನೊಂದಣಾಧಿಕಾರಿಗಳು ಸರ್ವೆ ನಂ. 81/2ಗೆ ಸ್ಮಶಾನ ಹನುಮಾನ ಮಂದಿರ ಟ್ರಸ್ಟ್‌ಗೆ ನೊಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕ ಆಯುಕ್ತರು ಬೆಂಗಳೂರು ಸುತ್ತೋಲೆಯ ವಿರುದ್ಧವಾಗಿ ಮತ್ತು ದೇವಸ್ಥಾನ ದಾಖಲೆಗಳನ್ನು ಪಡೆದುಕೊಳ್ಳದೆ ಕೇವಲ ಆಧಾರ ಪ್ರತಿಯ ಮೇಲೆ ನಿಯಮಗಳ ವಿರುದ್ಧವಾಗಿ ಸದರಿ ನೊಂದಣಿಯನ್ನು ಮಾಡಿದ್ದಾರೆ ಎಂದು ದೂರಿದ ಅವರು, ತಹಸಿಲ್ದಾರರು ಖಾನಾಪುರ ಆದಿ ಶಿವಶಕ್ತಿ ಮಂದಿರದ ಪಂಚನಾಮೆ ವರದಿ ಸಲ್ಲಿಸಲು ಸೂಚಿಸಿದ್ದರು. 2025ರ ಡಿಸೆಂಬರ್ 26ರ ಕಂದಾಯ ನಿರೀಕ್ಷಕರ ವರದಿಯಲ್ಲಿ ಸರ್ವೆ ನಂ. 81/2ರಲ್ಲಿ ನೊಂದಣಿಯಾದ ಸ್ಮಶಾನ ಹನುಮಾನ ಮಂದಿರ ಟ್ರಸ್ಟ್ ಸರ್ವೆ ನಂ. 82/2ರಲ್ಲಿ ಇದೆ ಎಂದು ಸುಳ್ಳು ವರದಿ ಸಲ್ಲಿಸಿದ್ದಾರೆ. ಹೀಗಾಗಿಕಂದಾಯ ನಿರೀಕ್ಷಕರು ಭ್ರಷ್ಟಾಚಾರದಲ್ಲಿ ಭಾಗಿಯಾಗಿದ್ದಾರೆ ಎಂದು ಆರೋಪಿಸಿದರು.

ಭೂದಾಖಲೆಗಳ ಸಹಾಯಕ ನಿರ್ದೇಶಕರು ಬಡೇಪೂರ್ ಸರ್ವೆ ನಂ. 81/2ರಲ್ಲಿ ನೊಂದಣಿಯಾದ ಮತ್ತು ರದ್ದಾದ ಸ್ಮಶಾನ ಹನುಮಾನ ಮಂದಿರ ಟ್ರಸ್ಟ್ ಅಧ್ಯಕ್ಷರ ಹೇಳಿಕೆಯ ಪ್ರಕಾರ ನಮ್ಮ ಜಮೀನು ಸರ್ವೆ ನಂ. 82/2ರಲ್ಲಿ 2011ರ ಏಪ್ರಿಲ್ 8ರಂದು ಸಿಟಿಎಸ್ ನಂ. 235 ಸೀಟ್ ನಂ 215, ವಿಭಾಗ 4ರಲ್ಲಿ ಯಾವುದೇ ಮೂಲ ದಾಖಲೆಗಳನ್ನು ಪಡೆದುಕೊಳ್ಳದೇ ಸ್ಮಶಾನ ಹನುಮಾನ್ ಮಂದಿರ ಟ್ರಸ್ಟ ಎಂದು ನೊಂದಣಿ ಮಾಡಿದ್ದಾರೆ. ಮಹಾನಗರ ಪಾಲಿಕೆಯವರು ಸಹ ಟ್ರಸ್ಟ್ ಅಧ್ಯಕ್ಷರ ಹೇಳಿಕೆಯ ಪ್ರಕಾರವೇ ಸ್ಮಶಾನ ಹನುಮಾನ್ ಟ್ರಸ್ಟ್ ಎಂದು ನೊಂದಣಿ ಮಾಡಿ ಇ ಸ್ವತ್ತು ಮಾಡಿಕೊಟ್ಟಿದ್ದಾರೆ ಎಂದು ಅವರು ಆರೋಪಿಸಿದರು.

ಬಡೇಪುರದ ಗ್ರಾಮ ಲೆಕ್ಕಿಗ ಅಧಿಕಾರಿಗಳು ಸರ್ವೆ ನಂ. 12/02ರಲ್ಲಿ ಭೂ ಕಂದಾಯ 2016ರಲ್ಲಿ ಕಟ್ಟಲಾಗಿದೆ. ಆದರೆ ಬಾಕಿಯಿರುವ ಕಂದಾಯ ಕಟ್ಟಿಕೊಳ್ಳುತ್ತಿಲ್ಲ, ಯಾವುದೇ ತಲಪರ ಹಿಂಬರಹ ಕೊಡುತ್ತಿಲ್ಲ. ಒತ್ತುವರಿ ಮಾಡಿಕೊಂಡಿರುವವರ ಮೇಲೆ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಸಹಾಯಕ ಆಯುಕ್ತರಿಗೆ ಈ ಕುರಿತು ನಾವು ಅರ್ಜಿ ಸಲ್ಲಿಸಿದರೆ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರು ನಮ್ಮ ಅರ್ಜಿ 18 ದಿಬಗಳ ಮೊದಲೇ ವರ್ಗಾವಣೆ ಮಾಡಿದ್ದಾರೆ. ಅದೂ ಸಂಬಂಧವಿರದ ಕಚೇರಿಗೆ ವರ್ಗಾವಣೆ ಮಾಡಿದ್ದಾರೆ ಎಂದು ಅವರು ದೂರಿದರು.

ನಮ್ಮ ಸ್ಥಳವನ್ನು ಒತ್ತುವರಿ ಮಾಡಿಕೊಂಡವರೇ ನಮ್ಮ ವಿರುದ್ಧ ಎಂ.ಬಿ. ನಗರ ಪೊಲೀಸ್ ಠಾಣೆಯಲ್ಲಿ ಕಳೆದ 2025ರ ಡಿಸೆಂಬರ್ 22ರಂದು ದೂರು ಸಲ್ಲಿಸಿದ್ದು, ಟ್ರಸ್ಟ್‌ನವರು ಹೇಳಿದಂತೆ ಪೊಲೀಸರು ಕೇಳುತ್ತಿದ್ದು, ನಮಗೆ ನ್ಯಾಯ ಕೊಡಿಸುವ ಬದಲು ನಾವು ನಮ್ಮ ಜಮೀನಿನಲ್ಲಿರುವ ದೇವಸ್ಥಾನಕ್ಕೆ ಭೇಟಿ ನೀಡದಂತೆ ತಡೆಯುತ್ತಿದ್ದಾರೆ. ನೋಟಿಸ್ ಕೊಟ್ಟು ಹೆದರಿಸುತ್ತಿದ್ದಾರೆ. ಇದೆಲ್ಲ ಬಿ.ಜಿ. ಪಾಟೀಲ್ ಹಾಗೂ ಟ್ರಸ್ಟ್‌ನವರ ಪ್ರಭಾವವೇ ಕಾರಣವಾಗಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಕೂಡಲೇ ನಮ್ಮ ಜಮೀನು ಹಾಗೂ ದೇವಸ್ಥಾನವನ್ನು ನಮ್ಮ ವಶಕ್ಕೆ ಕೊಡಬೇಕು ಎಂದು ಒತ್ತಾಯಿಸಿದ ಅವರು, ಎಲ್ಲ ದಾಖಲೆಗಳು ನಮ್ಮ ಹೆಸರಿನಲ್ಲಿವೆ. ಹಾಗಾಗಿ ನಾವು ಯಾವುದೇ ರೀತಿಯಲ್ಲಿ ನ್ಯಾಯಾಲಯಕ್ಕೆ ಹೋಗುವುದಿಲ್ಲ. ಟ್ರಸ್ಟ್‌ನವರ ಹತ್ತಿರ ಸುಳ್ಳು ದಾಖಲೆಗಳು ಇದ್ದು,

ಪ್ರಭಾವಿ ವ್ಯಕ್ತಿಗಳಾಗಿದ್ದರಿಂದ ನಮಗೆ ಹೆದರಿಸುತ್ತಿದ್ದಾರೆ. ಇದನ್ನು ನಾವು ಸಹಿಸುವುದಿಲ್ಲ ಎಂದು ಅವರು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಆನಂದ್ ಭೀಮರಾವ್ ಖಾನಾಪೂರ್, ಭೀಮರಾವ್ ಶಿವರಾವ್ ಖಾನಾಪೂರ್ ಅವರು ಉಪಸ್ಥಿತರಿದ್ದರು.

# ಕೆಯುಡಬ್ಲ್ಯೂಜೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಕನ್ನಡ ಮಾತೃ ಭೂಮಿ ವಾರ್ತೆ

**ಬೆಂಗಳೂರು,ಏ.26-**ಎಸ್‌ಎಸ್‌ಎಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ. 90ಕ್ಕೂ ಹೆಚ್ಚು ಅಂಕಗಳಿಸಿದ ಪತ್ರಕರ್ತರ ಮಕ್ಕಳ ಪ್ರತಿಭಾ ಪುರಸ್ಕಾರಕ್ಕಾಗಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (ಕೆಯುಡಬ್ಲ್ಯೂಜೆ )ಅರ್ಜಿ ಆಹ್ವಾನಿಸಿದೆ.

ವಿದ್ಯಾರ್ಥಿಯ ಅಂಕ ಪಟ್ಟಿಯ ನಕಲನ್ನು ಶಾಲಾ/ ಕಾಲೇಜಿನ ಮುಖ್ಯಸ್ಥರಿಂದ ದೃಢೀಕರಿಸಿರಬೇಕು.

ಸಂಘದ ಸದಸ್ಯರ ಆಧಾರ್ ಮತ್ತು ವಿದ್ಯಾರ್ಥಿಯ ಆಧಾರ್ ಜೆರಾಕ್ಸ್ ಮತ್ತು ಸಂಘದ ಐಡಿ ಕಾರ್ಡ್ (ಕಡ್ಡಾಯ) ಜೆರಾಕ್ಸ್ ಹಾಗೂ ವಿದ್ಯಾರ್ಥಿಯ ಭಾವಚಿತ್ರ ಸಹಿತ ಅರ್ಜಿ ಸಲ್ಲಿಸಬೇಕು.

(ವಿದ್ಯಾರ್ಥಿ ಭಾವಚಿತ್ರ ಹಿಂಬದಿ ತಪ್ಪದೇ ಅವರ ಹೆಸರು ಬರೆಯಿರಿ)

ಶೇ.90ಕ್ಕಿಂತ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳು ಸಂಘವು ನಿಗಧಿಪಡಿಸಿರುವ ನಮೂನೆಯಲ್ಲಿ ಜಿಲ್ಲಾ ಸಂಘದ ದೃಢೀಕರಣದೊಂದಿಗೆ 10-5-2026 ರೊಳಗಾಗಿ ಅಧ್ಯಕ್ಷರು/ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, 3ನೇ ಮಹಡಿ, ಕಂದಾಯ ಭವನ, ಕೆಜಿ ರಸ್ತೆ, ಬೆಂಗಳೂರು-09 ಇಲ್ಲಿಗೆ ತಲಪುವಂತೆ ಕಳುಹಿಸಬೇಕು.

ಅರ್ಜಿ ಮತ್ತು ಇತರೆ ಮಾಹಿತಿಗಾಗಿ ಆಯಾ ಜಿಲ್ಲಾ ಸಂಘವನ್ನು ಸಂಪರ್ಕಿಸಿ ಪಡೆಯಬಹುದು ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಮತ್ತು ಪ್ರಧಾನ ಕಾರ್ಯದರ್ಶಿ ಜಿ.ಸಿ.ಲೋಕೇಶ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಲಿಂಗರಾಜಪ್ಪ ಎಂಜಿನಿಯರಿಂಗ್ ಕಾಲೇಜಿನಲ್ಲಿ ಅಂತಾರಾಷ್ಟ್ರೀಯ ಸಮ್ಮೇಳನ ಯಶಸ್ವಿಯಾಗಿ ಆಯೋಜನೆ

ಕನ್ನಡ ಮಾತೃ ಭೂಮಿ ವಾರ್ತೆ



**ಬೀದರ್, ಏ.26-**ಜಿಲ್ಲೆಯ ಲಿಂಗರಾಜಪ್ಪ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಇಂಟೆಲಿಜೆಂಟ್ ಸಿಸ್ಟಮ್ಸ್ ಮತ್ತು ಕಂಪ್ಯೂಟೇಶನಲ್ ನೆಟ್ವರ್ಕ್ಸ್ (ICISCN-2026) ಎಂಬ ದ್ವಿತೀಯ ಅಂತಾರಾಷ್ಟ್ರೀಯ ಸಮ್ಮೇಳನ ವನ್ನು ಯಶಸ್ವಿಯಾಗಿ ಆಯೋಜಿಸಲಾಯಿತು.

IEEE ಬೆಂಗಳೂರು ಸೆಕ್ಷನ್, IEEE Computational Intelligence Society ಹಾಗೂ IEEE ಉತ್ತರ ಕರ್ನಾಟಕ ಉಪವಿಭಾಗದ ತಾಂತ್ರಿಕ ಸಹಯೋಗದೊಂದಿಗೆ ಈ ಸಮ್ಮೇಳನ ನಡೆಯಿತು. ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಪೂಜ್ಯ ಮಾತುಶ್ರೀ ಡಾ. ದಾಕ್ಷಾಯಣಿ ಎಸ್. ಅಪ್ಪ ಹಾಗೂ ಶರಣಬಸವೇಶ್ವರ ಸಂಸ್ಥಾನದ ಮಹಾದಾಸೋಹ ಪೀಠಾಧಿಪತಿ ಪೂಜ್ಯ ದೊಡ್ಡಪ್ಪ ಅಪ್ಪ ಅವರ ಆಶೀರ್ವಾದದಲ್ಲಿ ಕಾರ್ಯಕ್ರಮಕ್ಕೆ ಚಾಲನೆ ದೊರಕಿತು.

ಉದ್ಘಾಟನಾ ಸಮಾರಂಭದಲ್ಲಿ ಮಹಾವಿದ್ಯಾಲಯದ ಕಾರ್ಯದರ್ಶಿ ಬಸವರಾಜ್ ದೇಶಮುಖ್ ಮಾತನಾಡಿ, ವಿದ್ಯಾರ್ಥಿಗಳ ಜ್ಞಾನ ವೃದ್ಧಿ ಮತ್ತು ಸಂಶೋಧನಾ ಚಟುವಟಿಕೆಗಳಿಗೆ ಇಂತಹ ಸಮ್ಮೇಳನಗಳು ಪೂರಕವಾಗುತ್ತವೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ದಕ್ಷಿಣ ಕೊರಿಯಾದ ಡೋಂಗ್ಸಿಯೋ ವಿಶ್ವವಿದ್ಯಾಲಯದ ಡಾ. ಡೇ-ಕಿ ಕಾಂಗ್ ಹಾಗೂ ಗೌರವ ಅತಿಥಿಯಾಗಿ ಐಐಟಿ ಖರಗ್ಪುರದ ಡಾ. ದೇವದಿತ್ಯ ರಾಯ್ ಭಾಗವಹಿಸಿ ತಾಂತ್ರಿಕ ಉಪನ್ಯಾಸಗಳನ್ನು ನೀಡಿದರು. ಇದಲ್ಲದೆ ಸ್ಪೇನ್, ಇಟಲಿ ಮತ್ತು ಮೆಕ್ಸಿಕೋ ಸೇರಿದಂತೆ ಹಲವು ದೇಶಗಳ ತಜ್ಞರು ತಮ್ಮ ಸಂಶೋಧನಾ ಅನುಭವಗಳನ್ನು ಹಂಚಿಕೊಂಡರು. ಬೀದರ್‌ನ ಗುರುನಾನಕ್ ದೇವ್ ಇಂಜಿನಿಯರಿಂಗ್ ಕಾಲೇಜಿನ ಡಾ. ಸವಿತಾ ಸೋಮು ಕೂಡ ಉಪಸ್ಥಿತರಿದ್ದರು.

ಸಮ್ಮೇಳನದ ಮುಖ್ಯ ಉದ್ದೇಶ ಇಂಟೆಲಿಜೆಂಟ್ ಸಿಸ್ಟಮ್ಸ್ ಮತ್ತು ಕಂಪ್ಯೂಟೇಶನಲ್ ನೆಟ್ವರ್ಕ್ಸ್ ಕ್ಷೇತ್ರದಲ್ಲಿ ನಡೆಯುತ್ತಿರುವ ಹೊಸ ಸಂಶೋಧನೆ ಗಳನ್ನು ಹಂಚಿಕೊಳ್ಳುವುದು ಮತ್ತು ವಿದ್ಯಾರ್ಥಿಗಳು ಹಾಗೂ ಸಂಶೋಧಕರ ತಾಂತ್ರಿಕ ಜ್ಞಾನವನ್ನು ವಿಸ್ತರಿಸುವುದಾಗಿದೆ.

ಈ ಬಾರಿ ಸಮ್ಮೇಳನಕ್ಕೆ ವಿಶ್ವದ ವಿವಿಧ ದೇಶಗಳಿಂದ ಭಾರೀ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಇಟಲಿ, ಸ್ಪೇನ್, ಟರ್ಕಿ, ಮಲೇಷ್ಯಾ, ಇಂಡೋನೇಷ್ಯಾ, ಥೈಲ್ಯಾಂಡ್, ವಿಯೆಟ್ನಾಂ ಸೇರಿದಂತೆ ಅನೇಕ ದೇಶಗಳಿಂದ ಹಾಗೂ ಭಾರತದ ಪ್ರಮುಖ ಶಿಕ್ಷಣ ಸಂಸ್ಥೆಗಳಾದ IIT, NIT ಮತ್ತು IIIT ಗಳಿಂದ ಸುಮಾರು 1700ಕ್ಕೂ ಹೆಚ್ಚು ಸಂಶೋಧನಾ ಪ್ರಬಂಧಗಳು ಸಲ್ಲಿಕೆಯಾಗಿವೆ. ಅವುಗಳಲ್ಲಿ IEEE ಮಾನದಂಡದ ಪರಿಶೀಲನೆಯ ನಂತರ 274 ಗುಣಮಟ್ಟದ ಪ್ರಬಂಧಗಳನ್ನು ಆಯ್ಕೆ ಮಾಡಲಾಗಿದೆ.

ಸಮ್ಮೇಳನದ ಅಂಗವಾಗಿ ವಿವಿಧ ತಾಂತ್ರಿಕ ಸತ್ರಗಳು, ಪೇಪರ್ ಪ್ರಸ್ತುತಿಗಳು ಮತ್ತು ಚರ್ಚೆಗಳು ನಡೆದವು. ವಿಶ್ವದ ವಿವಿಧ ದೇಶಗಳ ವಿಜ್ಞಾನಿಗಳು, ಪ್ರಾಧ್ಯಾಪಕರು ಮತ್ತು ಸಂಶೋಧಕರು ಭಾಗವಹಿಸಿ ತಮ್ಮ ಸಂಶೋಧನಾ ಪ್ರಬಂಧಗಳನ್ನು ಮಂಡಿಸಿದರು.

ಈ ಸಮ್ಮೇಳನವು ವಿದ್ಯಾರ್ಥಿಗಳು ಮತ್ತು ಸಂಶೋಧಕರಿಗೆ ಹೊಸ ತಂತ್ರಜ್ಞಾನಗಳ ಅರಿವು ಮೂಡಿಸುವಲ್ಲಿ ಪ್ರಮುಖ ವೇದಿಕೆಯಾಗಿದ್ದು, ICISC N ತನ್ನ ದ್ವಿತೀಯ ಆವೃತ್ತಿಯಲ್ಲಿ ಇನ್ನಷ್ಟು ಉತ್ಸಾಹ ಮತ್ತು ಶೈಕ್ಷಣಿಕ ಮೇಲುಸ್ತುವಾರಿಯೊಂದಿಗೆ ಮುಂದುವರಿದಿದೆ.

ಪ್ರಾಂಶುಪಾಲರಾದ ಡಾ. ವಿನೀತಾ ಪಾಟೀಲ್ ಸ್ವಾಗತಿಸಿದರು. ಡಾ. ವಿವೇಕ್ ಜಲಾದಿ ಪ್ರಾಸ್ತಾವಿಕವಾಗಿ ಸಮ್ಮೇಳನದ ವಿವರ ನೀಡಿದರು. ಪ್ರೊ. ದೀಪಿಕಾ ಕಾರ್ಯಕ್ರಮವನ್ನು ನಿರೂಪಿಸಿದರು. IEEE ವಿದ್ಯಾರ್ಥಿ ಶಾಖೆಯ ಸಲಹೆಗಾರರಾದ ಡಾ. ಬಸವಲಿಂಗ ಸ್ವಾಮಿ ವಂದಿಸಿದರು.

ಕಾರ್ಯಕ್ರಮದಲ್ಲಿ ಎಲ್ಲಾ ವಿಭಾಗದ ಮುಖ್ಯಸ್ಥರು, ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ಸ್ನೇಹ ಸೌಹಾರ್ದತೆ ಸಂದೇಶ ನೀಡುವುದೇ ಕ್ರೀಡೆಯ ಉದ್ದೇಶವಾಗಲಿ - ಶರಣಪ್ಪ ಮಾನಗೇಗಾರ



ಕನ್ನಡ ಮಾತೃ ಭೂಮಿ ವಾರ್ತೆ

**ಯಾದಗಿರಿ,ಏ.26-**ಕ್ರೀಡೆಗಳು ಕೇವಲ ಗೆಲುವು- ಸೋಲಿನ ಆಟವಲ್ಲ, ಅದು ದೈಹಿಕ ಮತ್ತು ಮಾನಸಿಕ ಸದೃಢತೆಯನ್ನು ಹೆಚ್ಚಿಸಿ ಮತ್ತು ಪ್ರೀತಿ, ವಿಶ್ವಾಸ, ಸ್ನೇಹ ಸೌಹಾರ್ದತೆಯನ್ನು ಬೆಸೆಯುವ ಸಾಧನ ವಾಗಿದೆ ಎಂದು ಹಿಂದುಳಿದ ವರ್ಗಗಳ ಆಯೋಗದ ಮಾಜಿ ಸದಸ್ಯರಾದ ಶರಣಪ್ಪ ಮಾನೇಗಾರ ಯರಗೋಳ ಅವರು ಅಭಿಪ್ರಾಯಪಟ್ಟರು.

ಯಾದಗಿರಿ ತಾಲೂಕಿನ ಕೆ.ಹೊಸಳ್ಳಿ ಗ್ರಾಮದಲ್ಲಿ ಹಮ್ಮಿಕೊಂಡ ಕೆ. ಹೊಸಳ್ಳಿ ಪ್ರೀಮಿಯಮ್ ಲೀಗ್ ಜೆಡ್.ಪಿ ಸೀಜನ್ 01 ರ ಕ್ರಿಕೆಟ್ ಟೂರ್ನ ಮೆಂಟ್ ಆಯೋಜನೆಗೆ ಚಾಲನೆ ನೀಡಿ ಅವರು ಮಾತನಾಡಿದರು. ಗುರುಮಠಕಲ್ ಕ್ಷೇತ್ರದಲ್ಲಿನ ಯುವಕರಲ್ಲಿನ ಕ್ರೀಡಾ ಉತ್ಸವ ಮತ್ತು ಮನೋಭಾವನೆಯನ್ನ ಅಭಿನಂದಿಸಿ ಸದಾ ಪ್ರೊತ್ಸಾಹಿಸುತ್ತೇನೆ. ಇಲ್ಲಿ ಹಲ ವಾರು ಗ್ರಾಮಗಳಿಂದ ವಿವಿಧ ತಂಡಗಳು ಬಂದಿದ್ದೀರಿ ಯಾರೂ ಕೂಡ ಆಟದಲ್ಲಿ ಅನ್ಯತ ಮನಸ್ತಾಪ ಮಾಡಿಕೊಳ್ಳದೇ ಒಬ್ಬರಿಗೊಬ್ಬರು ಅಣ್ಣತಮ್ಮ ಸೋದರ ರಾಗಿ ಧನಾತ್ಮಕವಾಗಿ ಆಡಬೇಕು.

ಯುವಕರು ಮೊಬೈಲ್ ಗೀಳಿನಿಂದ ಹೊರಬರಬೇಕು. ಕ್ರೀಡೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡರೆ ದೇಹದಲ್ಲಿನ ರೋಗಗಳನ್ನು ಕಡಿಮೆ ಮಾಡಿ, ಆರೋಗ್ಯವನ್ನು ವೃದ್ಧಿಸಿಕೊಳ್ಳಬಹುದು. ಯಾವು ದೇ ಆಟದಲ್ಲಿ ಗೆಲುವು-ಸೋಲು ಸಹಜ. ಕೀಳರಿಮೆಯ ಭಾವನೆ ಬೇಡ ಎಂದರು.

ಪ್ರತಿಭೆ ಎನ್ನುವುದು ಯಾರ ಸ್ವತ್ತಲ್ಲ, ಅದು ಕಷ್ಟಪಟ್ಟು ಸಾಧಿಸಿದವರ ಸ್ವತ್ತಾಗಿರುತ್ತದೆ. ಯುವ ಪೀಳಿಗೆ ತಮ್ಮಲ್ಲಿರುವ ಪ್ರತಿಭೆಯನ್ನು ರಾಜ್ಯ, ರಾಷ್ಟ್ರ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರದರ್ಶನ ಮಾಡಿ ಉತ್ತರ ಕರ್ನಾಟಕ ಭಾಗದ ಮಹಿಳಾ ಕ್ರಿಕೆಟ್ ತಂಡದ ಪ್ರತಿಭಾನ್ವಿತೆ ಶ್ರೇಯಾಂ ಕ ಪಾಟೀಲ್ ರಂತೆ ಸಾಧನೆ ಮಾಡಿ ದೇಶಕ್ಕೆ ಕೀರ್ತಿ ತನ್ನಿ ಎಂದು ಪ್ರೋತ್ಸಾಹಿಸಿದರು. ಈ ಸಂದರ್ಭದಲ್ಲಿ ಕರವೇ ತಾಲ್ಲೂಕ ಅಧ್ಯಕ್ಷ ಮಲ್ಲು ಮಾಳಿಕೇರಿ, ಮಲ್ಲಪ್ಪ ಪೂಜಾರಿ, ದೇವಿಂದ್ರಪ್ಪ ಮೋಟನಳ್ಳಿ, ಜೀವನಕುಮಾರ, ಗೂಳಪ್ಪ ಬೋಯಿನ್, ನಾಗಪ್ಪ ಬೋಯಿನ್, ಜಗಪ್ಪ ಕೋಟಾಗಿರಿ, ವೀರೇಶ್ ಸಜ್ಜನ್, ಈರಣ್ಣಗೌಡ ಯಾರಗೋಳ , ಯಂಕಯ್ಯ ಕಲಾಲ್ , ಸುಧೀರ್ ಕಂಬರ್, ಸಾಲುಮನ್ ನಡುವಿನಕೇರಿ, ಆನಂದ ನಾಟೇಕರ್, ಭೀಮಯ್ಯ ಕಲಾಲ್, ಸೈದಾಪುರ ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷ ಅಂಜನೇಯ ಕಟ್ಟಿಮನಿ ರಾಂಪುರ, ಮಲ್ಲು, ನಾಗಪ್ಪ ಸಜ್ಜನ್, ವೆಂಕಟೇಶ್ ಯಾದವ್ ಬದ್ದೇ ಪಲ್ಲಿ, ನಾಗಪ್ಪ ಸಜ್ಜನ್, ಭೀಮಯ್ಯ ದಾಸರಿ ಸಂಬರ, ಅನಿಲ್ ಕಂದಕೂರ, ಮಲ್ಲಪ್ಪ ಚಿಂತಕುಂಟ ಮಲ್ಲಪ್ಪ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಡಾ.ರಾಜ್‌ಕುಮಾರ್ ಸಂತನಂತೆ ಬದುಕಿದ ಮಹಾನ್ ಚೇತನ - ಕೆ.ಇ.ಚಿದಾನಂದಪ್ಪ

ಕನ್ನಡ ಮಾತೃ ಭೂಮಿ ವಾರ್ತೆ



**ಬಳ್ಳಾರಿ,ಏ.26-**ಡಾ. ರಾಜ್‌ಕುಮಾರ್ ಅವರು ಕೇವಲ ಒಬ್ಬ ನಟರಾಗಿರದೆ, ಸಂತನಂತೆ ಬದುಕಿದ ಮಹಾನ್ ಚೇತನ. ಸರಳ ಸಜ್ಜನಿಕೆಯ ಸಾಕಾರಮೂರ್ತಿಯಾಗಿದ್ದರು ಎಂದು ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಡಾ.ರಾಜ್‌ಕುಮಾರ್ ಜನ್ಮದಿನಾಚರಣೆಯ ಅಂಗವಾಗಿ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಶುಕ್ರವಾರ ಏರ್ಪಡಿಸಿದ್ದ ಕನ್ನಡ ಚಲನಚಿತ್ರ ಗೀತೆಗಳ ಗಾಯನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಡಾ.ರಾಜ್ ಕುಮಾರ್ ಅವರಿಗೆ ಹಣ, ಅಧಿಕಾರ, ಯೌವನ ಮತ್ತು ರೂಪದಂತಹ ಎಲ್ಲ 'ಮದ'ಗಳು ಲಭ್ಯವಿದ್ದರೂ, ಅವುಗಳನ್ನು ಧಿಕ್ಕರಿಸಿ ವಿನಯವಂತಿಕೆಯಿಂದ ಬದುಕಿದವರು. ಅವರ ವ್ಯಕ್ತಿತ್ವವು ಎಲ್ಲ ಕಾಲಕ್ಕೂ ಎಲ್ಲ ಕಲಾವಿದರಿಗೂ ಮಾದರಿಯಾಗಿದೆ ಎಂದು ಬಣ್ಣಿಸಿದರು.

ಸಮಾಜದಲ್ಲಿ ಇಂದು ಜಾತಿ ರಾಜಕಾರಣ ಮತ್ತು ಪ್ರತಿಯೊಂದು ಸಾಧನೆಯ ಹಿಂದೆ ಜಾತಿಯನ್ನು ಹುಡುಕುವ ಪ್ರವೃತ್ತಿ ಹೆಚ್ಚಾಗಿದೆ. ಆದರೆ ಡಾ. ರಾಜ್‌ಕುಮಾರ್ ಅವರು ಜಾತಿಯನ್ನು ಮೀರಿ ಬೆಳೆದ 'ಜಾತ್ಯತೀತ ಜ್ಯೋತಿಯಾಗಿದ್ದರು. ಅಧಿಕಾರದ ಆಸೆಗಾಗಿ ಅವರು ಎಂದೂ ರಾಜಕೀಯಕ್ಕೆ ಬರಲಿಲ್ಲ, ಬದಲಾಗಿ ಕನ್ನಡ ನಾಡಿನ ಕಲೆ ಮತ್ತು ಸಂಸ್ಕೃತಿಯ ಪ್ರತಿಬಿಂಬವಾಗಿ ಉಳಿದರು ಎಂದು ಸ್ಮರಿಸಿದರು.

ರಾಜ್‌ಕುಮಾರ್ ಅವರು ತಮ್ಮ ಸಿನಿಮಾಗಳ ಮೂಲಕ ನಾಡಿಗೆ ಯೋಗದ ಮಹತ್ವವನ್ನು ತಿಳಿಸಿಕೊಟ್ಟವರು. 'ಬಂಗಾರದ ಮನುಷ್ಯ' ಚಿತ್ರದ ಮೂಲಕ ಕೃಷಿಯ ಮಹತ್ವವನ್ನು ಸಾರಿದ್ದರಿಂದ ಅನೇಕ ಯುವಕರು ಕೃಷಿಯತ್ತ ಆಕರ್ಷಿತರಾಗಿದ್ದರು. ಅವರು ಸಿನಿಮಾದಲ್ಲಿ ತೋರಿದ ಆದರ್ಶಗಳನ್ನು ತಮ್ಮ ನಿಜ ಜೀವನದಲ್ಲೂ ಪಾಲಿಸಿಕೊಂಡು ಬಂದವರು ಎಂದು ತಿಳಿಸಿದರು.

ಭಕ್ತ ಕುಂಬಾರ, ಭಕ್ತ ಕನಕದಾಸ, ಸಂತ ತುಕಾರಾಂ, ಬೇಡರ ಕಣ್ಣಪ್ಪ ಮತ್ತು ರಾಘವೇಂದ್ರ ಸ್ವಾಮಿಗಳ ಪಾತ್ರಗಳಲ್ಲಿ ನಟಿಸುವ ಮೂಲಕ ಆ ವ್ಯಕ್ತಿತ್ವಗಳ ಬಗ್ಗೆ ಸಾಮಾನ್ಯ ಜನರಿಗೂ ತಿಳಿಯುವಂತೆ ಮಾಡಿದರು. ಅವರ ಸರಳ ಸಜ್ಜನಿಕೆಯೇ ಅವರಿಗೆ ಇಂದಿಗೂ ಅಪಾರ ಅಭಿಮಾನಿಗಳನ್ನು ಗಳಿಸಿಕೊಟ್ಟಿದೆ ಎಂದರು.

ಬಳ್ಳಾರಿಯ ಆಕಾಶವಾಣಿ ಎಫ್‌ಎಂ ಕೇಂದ್ರದ ಉದ್ಘೋಷಕರಾದ ಬಸವರಾಜ ಅಮಾತಿ ಅವರು ವಿಶೇಷ ಉಪನ್ಯಾಸ ನೀಡಿ, ಡಾ. ರಾಜ್‌ಕುಮಾರ್ ಅವರು ಏಪ್ರಿಲ್ 24, 1929 ರಂದು ಜನಿಸಿದರು. ಅವರ ತಂದೆ ಸಿಂಗಾನಲ್ಲೂರು ಪುಟ್ಟಸ್ವಾಮಯ್ಯನವರು ಅಪ್ರತಿಮ ರಂಗಭೂಮಿ ಕಲಾವಿದರಾಗಿದ್ದರು. ರಾಜ್ ಕುಮಾರ್ 'ಬೇಡರ ಕಣ್ಣಪ್ಪ' (1954) ಚಿತ್ರದ ಮೂಲಕ ಬೆಳ್ಳಿತೆರೆಗೆ ಪಾದಾರ್ಪಣೆ ಮಾಡಿದರು. ಅಲ್ಲಿಂದ ಆರಂಭವಾದ ಅವರ ಸಿನಿ ಪಯಣ ಸುಮಾರು 200 ರಿಂದ 205 ಚಿತ್ರಗಳಲ್ಲಿ ನಟಿಸಿದ್ದಾರೆ ಎಂದು ತಿಳಿಸಿದರು.

ಬಳ್ಳಾರಿಯೊಂದಿಗೆ ಸಂಬಂಧ:

ಡಾ. ರಾಜ್ ಅವರು ಕೇವಲ ನಟರಾಗಿರದೆ ಸಮಾಜ ಸೇವಕರಾಗಿಯೂ ಗುರುತಿಸಿಕೊಂಡಿದ್ದರು. 1995 ರಲ್ಲಿ ಬಳ್ಳಾರಿಯಲ್ಲಿ ರಸಮಂಜರಿ ಕಾರ್ಯಕ್ರಮ ನಡೆಸಿ, ಅದರಿಂದ ಬಂದ ಹಣವನ್ನು ರಂಗಮಂದಿರ ನಿರ್ಮಾಣಕ್ಕೆ ದೇಣಿಗೆ ನೀಡಿದ್ದರು. ಸರ್ಕಾರ ಪ್ರಶಸ್ತಿ ಘೋಷಿಸಿದಾಗ, ತಮಗಿಂತ ಮೊದಲು ಕುವೆಂಪು ಅವರಿಗೆ ಈ ಗೌರವಸಿಗಬೇಕು ಎಂದು ಅವರು ಬಯಸಿದ್ದರು. ನಂತರ ಇಬ್ಬರಿಗೂ ಜಂಟಿಯಾಗಿ ಈ ಪ್ರಶಸ್ತಿ ನೀಡಲಾಯಿತು. ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿಯೊಂದಿಗೆ ಬಂದ ಹಣವನ್ನೆಲ್ಲಾ ಅವರು ಕನ್ನಡ ಸಾಹಿತ್ಯ ಪರಿಷತ್ತಿಗೆ ದತ್ತಿಯಾಗಿ ನೀಡಿದರು ಎಂದರು.

ಡಾ.ರಾಜ್ ಕುಮಾರ್ ಅವರು ಸಹಕಲಾವಿದರಿಗೆ ಗೌರವ ನೀಡುತ್ತಿದ್ದರು. ಚಿತ್ರೀಕರಣದ ಸೆಟ್ ಅನ್ನು ದೇವಸ್ಥಾನವೆಂದು ಭಾವಿಸುತ್ತಿದ್ದ ಅವರು, ಅಲ್ಲಿ ಧೂಮಪಾನ ಅಥವಾ ಮದ್ಯಪಾನಕ್ಕೆ ಅವಕಾಶ ನೀಡುತ್ತಿರಲಿಲ್ಲ. ಸ್ವತಃ ಅವರೂ ಕೂಡ ತೆರೆಯ ಮೇಲೆ ಇಂತಹ ದೃಶ್ಯಗಳಲ್ಲಿ ನಟಿಸಲು ನಿರಾಕರಿಸುತ್ತಿದ್ದರು ಎಂದರು.

**ಅಭಿಮಾನಿಗಳೇ ದೇವರು:**

ತಿರುಪತಿಯಲ್ಲಿ ಸಾಮಾನ್ಯ ಸರತಿಯಲ್ಲಿ ನಿಂತು ದರ್ಶನ ಪಡೆದ ಘಟನೆಯ ನಂತರ, ಅವರು ತಮ್ಮ ಅಭಿಮಾನಿಗಳನ್ನು 'ಅಭಿಮಾನಿ ದೇವರುಗಳು' ಎಂದು ಕರೆಯಲು ಆರಂಭಿಸಿದರು. ಗೋಕಾಕ್ ಚಳವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಕನ್ನಡ ಭಾಷೆಯ ಹಿತಾಸಕ್ತಿಗಾಗಿ ಶ್ರಮಿಸಿದರು. '

ಸಂಪತ್ತಿಗೆ ಸವಾಲ್' ಚಿತ್ರದ ಮೂಲಕ ಪೂರ್ಣ ಪ್ರಮಾಣದ ಗಾಯಕರಾದ ಅವರು, ಶಾಸ್ತ್ರೀಯ ಸಂಗೀತ ಮತ್ತು ಭಕ್ತಿಗೀತೆ ಗಳಿಗೂ ಧ್ವನಿಯಾದರು. ಅವರ 'ನಾದ ಮಯ' ಹಾಡು ಇಂದಿಗೂ ಜನಪ್ರಿಯ ವಾಗಿದೆ. ವಿಶೇಷವೆಂದರೆ, ಭಕ್ತಿಗೀತೆಗಳ ಗಾಯನದಿಂದ ಬಂದ ಹಣವನ್ನು ಅವರು ಎಂದಿಗೂ ಸ್ವಂತಕ್ಕೆ ಬಳಸದೆ ಮಠ-ಮಾನ್ಯಗಳಿಗೆ ನೀಡುತ್ತಿದ್ದರು ಎಂದು ತಿಳಿಸಿದರು.

ಕನ್ನಡ ನಾಡು, ನುಡಿ ಮತ್ತು ಸಂಸ್ಕೃತಿಗೆ ಡಾ. ರಾಜ್‌ಕುಮಾರ್ ಅವರು ನೀಡಿದ ಕೊಡುಗೆ ಅನನ್ಯ. ಅವರ ಸರಳತೆ ಮತ್ತು ಆದರ್ಶಗಳು ಇಂದಿನ ತಲೆಮಾರಿಗೆ ದಾರಿದೀಪವಾಗಿವೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಕೊಪ್ಪಳದ ಕ್ಷಿತಿ ಮ್ಯೂಸಿಕಲ್ ಈವೆಂಟ್ಸ್ ನ ತಂಡದವರು ಡಾ.ರಾಜ್ ಕುಮಾರ್ ನಟಿಸಿದ ಕನ್ನಡ ಚಲನಚಿತ್ರ ಗೀತೆಗಳ ಗಾಯನ ರಸದೌತಣವನ್ನು ಕಲಾಭಿಮಾನಿಗಳಿಗೆ ಉಣಬಡಿಸಿದರು. ಸಂವಿಧಾನ ಪ್ರಸ್ತಾವನೆ ಬೋಧಿಸಲಾಯಿತು.

ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ನಿಷ್ಠಿ ರುದ್ರಪ್ಪ, ಕನ್ನಡಪರ ಹೋರಾಟಗಾರರು ಹಾಗೂ ಕಲ್ಯಾಣ ಕರ್ನಾಟಕ ಹೋರಾಟ ಸಮಿತಿಯ ಜಿಲ್ಲಾಧ್ಯಕ್ಷ ಸಿರಿಗೇರಿ ಪನ್ನರಾಜ್, ಕನ್ನಡ ಮತ್ತು ಸಂಸ್ಕೃತಿಯ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವಾರ್ತಾ ಸಹಾಯಕ ವಿ.ಸಿ. ಗುರುರಾಜ ಸೇರಿದಂತೆ ವಿವಿಧ ಕನ್ನಡ ಪರ ಸಂಘಟನೆಗಳ ಪದಾಧಿಕಾರಿಗಳು, ಡಾ.ರಾಜ್ ಕುಮಾರ್ ಕಲಾಭಿಮಾನಿಗಳು, ಸಾರ್ವಜನಿಕರು, ಹಾಗೂ ಇತರರು ಉಪಸ್ಥಿತರಿದ್ದರು.

# ಎಸ್ಸೆಸ್ಸೆಲ್ಸಿ ಫಲಿತಾಂಶ: ವಿದ್ಯಾರ್ಥಿಗಳ ಸಾಧನೆಗೆ ಶಾಸಕ ಪ್ರಭು ಚವ್ಹಾಣ ಹರ್ಷ

ಕನ್ನಡ ಮಾತೃ ಭೂಮಿ ವಾರ್ತೆ



**ಔರಾದ್ (ಬಿ),ಏ.26-**ಎಸ್ಸೆಸ್ಸೆಲ್ಸಿ ಫಲಿತಾಂಶದಲ್ಲಿ ಔರಾದ (ಬಿ) ಹಾಗೂ ಕಮಲನಗರ ತಾಲ್ಲೂಕಿನ ವಿದ್ಯಾರ್ಥಿಗಳು ಗಮನಾರ್ಹ ಸಾಧನೆ ತೋರಿರುವುದಕ್ಕೆ ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕರಾದ ಪ್ರಭು ಬಿ. ಚವ್ಹಾಣ ಅವರು ಹರ್ಷ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಕಳೆದ ವರ್ಷ ಶೇ.56 ರಷ್ಟಿದ್ದ ತಾಲ್ಲೂಕಿನ ಫಲಿತಾಂಶವು ಈ ಬಾರಿ ಶೇ.92ಕ್ಕೆ ಏರಿಕೆಯಾಗಿ, ಜಿಲ್ಲೆಯಲ್ಲಿ ಎರಡನೇ ಸ್ಥಾನಕ್ಕೆ ಏರಿದೆ. ಅನೇಕ ವಿದ್ಯಾರ್ಥಿಗಳು ಶೇ.90ಕ್ಕಿಂತ ಹೆಚ್ಚು ಅಂಕಗಳಿಅದ ಉತ್ತೀರ್ಣರಾಗಿರುವುದಕ್ಕೆ ಬಹಳಷ್ಟು ಸಂತೋಷವಾಗಿದೆ ಎಂದಿದ್ದಾರೆ. ಪರೀಕ್ಷೆಯಲ್ಲಿ ಉತ್ತೀರ್ಣರಾದ ಎಲ್ಲಾ ವಿದ್ಯಾರ್ಥಿಗಳಿಗೆ ಅಭಿನಂದನೆಗಳನ್ನು ತಿಳಿಸಿದ ಅವರು, ನಿರೀಕ್ಷಿತ ಫಲಿತಾಂಶ ಪಡೆಯದ ವಿದ್ಯಾರ್ಥಿಗಳು ಮನೋಬಲ ಕಳೆದುಕೊಳ್ಳದೇ ಮುಂದಿನ ಅವಕಾಶಗಳಲ್ಲಿ ಉತ್ತಮ ಸಾಧನೆಗೆ ಯತ್ನಿಸಬೇಕು ಎಂದು ಸಲಹೆ ನೀಡಿದ್ದಾರೆ.

ಶಿಕ್ಷಣ ಕ್ಷೇತ್ರವನ್ನು ಅಭಿವೃದ್ಧಿಪಡಿಸಬೇಕು. ಮತ್ತು ಫಲಿತಾಂಶ ಸುಧಾರಿಸಬೇಕೆಂಬ ಉದ್ದೇಶದಿಂದ ನಾನು ನಿರಂತರ ಪ್ರಯತ್ನ ವಹಿಸುತ್ತಾ ಬಂದಿದ್ದೇನೆ. ಗ್ರಾಮ ಸಂಚಾರದ ಸಂದರ್ಭದಲ್ಲಿ ಪ್ರತಿ ಶಾಲೆ-ಕಾಲೇಜುಗಳಿಗೆ ಭೇಟಿ ನೀಡಿ ಪರಿಶೀಲನೆ ಮಾಡಿದ್ದೇನೆ. ಶಿಕ್ಷಕರ ಕೊರತೆ, ವಿದ್ಯಾರ್ಥಿಗಳಿಗೆ ಅನುಗುಣ ಶಿಕ್ಷಕರಿಲ್ಲದಿರುವುದು, ವಿಷಯವಾರು ಶಿಕ್ಷಕರ ಕೊರತೆಯಂತಹ ವಿವಿಧ ಸಮಸ್ಯೆಗಳನ್ನು ತಿಳಿದುಕೊಂಡು ಸರಿಪಡಿಸಲು ಪ್ರಯತ್ನಿಸಿದ್ದೇನೆ. ಇಲಾಖೆ ಅಧಿಕಾರಿಗಳು, ಶಿಕ್ಷಕರ ಜೊತೆಗೆ ಹಲವು ಹಂತಗಳಲ್ಲಿ ಸಭೆ ನಡೆಸಿ ಅಗತ್ಯ ಸಲಹೆ ಸೂಚನೆಗಳನ್ನು ನೀಡಿದ್ದೇನೆ.

ವಿದ್ಯಾರ್ಥಿಗಳ ಮನೋಬಲ ಹೆಚ್ಚಿಸಲು ಮತ್ತು ಓದಿನತ್ತ ಪ್ರೇರೇಪಿಸಲು ಪ್ರತಿ ವರ್ಷ ವಿದ್ಯಾರ್ಥಿಗಳು ಮತ್ತು ಅವರ ಪೋಷಕರನ್ನು ಸನ್ಮಾನಿಸುತ್ತಿದ್ದೇನೆ. ಶಿಕ್ಷಕರಿಗೂ ಸನ್ಮಾನ ಕಾರ್ಯಕ್ರಮವನ್ನು ಏರ್ಪಡಿಸಿ ಸರಿಯಾಗಿ ಬೋಧನೆ ಮಾಡುವಂತೆ ಪ್ರೇರಣೆ ನೀಡುವ ಕೆಲಸ ನಿರಂತರವಾಗಿ ಮುಂದುವರೆಸಿಕೊಅಡು ಬಂದಿದ್ದೇನೆ. ಈ ಎಲ್ಲ ಪ್ರಯತ್ನಗಳು, ವಿದ್ಯಾರ್ಥಿಗಳ ಪರಿಶ್ರಮ, ಶಿಕ್ಷಕರು ಮತ್ತು ಇಲಾಖೆಯ ಅಧಿಕಾರಿಗಳ ಸಮನ್ವಯತೆಯಿಂದಾಗಿ ಫಲಿತಾಂಶದಲ್ಲಿ ಗಣನೀಯ ಏರಿಕೆ ಕಂಡುಬಅದಿದೆ.

ಮುಂದಿನ ದಿನಗಳಲ್ಲಿ ಇನ್ನಷ್ಟು ಯೋಜಿತ ಕ್ರಮಗಳನ್ನು ಹಾಕಿಕೊಂಡು ಶೇ.100 ರಷ್ಟು ಫಲಿತಾಂಶ ತರುವ ಗುರಿಯೊಂದಿಗೆ ಶ್ರಮಿಸಬೇಕು. ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಮಕ್ಕಳ ದಾಖಲಾತಿಯನ್ನು ಮತ್ತಷ್ಟು ಹೆಚ್ಚಿಸಲು ಪ್ರಯತ್ನಿಸಬೇಕೆಂದು ಶಾಸಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಂಬಅಧಪಟ್ಟ ಅಧಿಕಾರಿಗಳು ಮತ್ತು ಶಿಕ್ಷಕರಿಗೆ ನಿರ್ದೇಶನ ನೀಡಿದ್ದಾರೆ.

ವಿದ್ಯಾರ್ಥಿಗಳಿಗೆ ಸನ್ಮಾನ: ಪ್ರತಿ ವರ್ಷದಂತೆ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯಲ್ಲಿ ಅತಿ ಹೆಚ್ಚು ಅಂಕಗಳಿಅದ ಉತ್ತೀರ್ಣರಾದ ಮೂರು ಟಾಪರ್‌ಗಳಿಗೆ ಬಹುಮಾನ ಹಾಗೂ ಶೇ.80ಕ್ಕಿಂತ ಹೆಚ್ಚು ಅಂಕಗಳಿಅದ ಉತ್ತೀರ್ಣರಾದ ಔರಾದ(ಬಿ) ಹಾಗೂ ಕಮಲನಗರ ತಾಲ್ಲೂಕಿನ ಎಲ್ಲ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಗುವುದೆಂದು ಶಾಸಕರು ತಿಳಿಸಿದ್ದಾರೆ.

## ವಾಲ್ಮೀಕಿ ವಿವಿಯಲ್ಲಿ ಬಸವ ಜಯಂತಿ ಹಾಗೂ ವಿಶೇಷ ಉಪನ್ಯಾಸ

# ಇತಿಹಾಸದ ಅಪರೂಪದ ನಾಯಕ ಬಸವಣ್ಣ: ರಂಜಾನ್ ದರ್ಗಾ

ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.26-**ಇತಿಹಾಸದ ಬಗ್ಗೆ ನಿಜವಾಗಲೂ ಪರಿಜ್ಞಾನ ಮೂಡಿಸಿಕೊಂಡಿದ್ದೆ ಆಗಿದ್ದಲ್ಲಿ ನಮಗೆ ದೊರಕುವ ನಿಜವಾದ ಅಪರೂಪದ ಇತಿಹಾಸದ ನಾಯಕ ಬಸವಣ್ಣ ಎಂದು ಚಿಂತಕರು ಹಾಗೂ ಧಾರವಾಡದ ಕರ್ನಾಟಕ ಕುಲಪುರೋಹಿತ ಆಲೂರ ವೆಂಕಟರಾವ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ಅಧ್ಯಕ್ಷರಾದ ರಂಜಾನ್ ದರ್ಗಾ ಹೇಳಿದರು.




ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯದಲ್ಲಿಂದು ಜಗಜ್ಯೋತಿ ಬಸವೇಶ್ವರರ ಜಯಂತಿ ಪ್ರಯುಕ್ತ ಹಮ್ಮಿಕೊಂಡ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಜಗಜ್ಯೋತಿ ಬಸವಣ್ಣ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಬಸವಣ್ಣ ಹನ್ನೆರಡನೇ ಶತಮಾನದ ಕ್ರಾಂತಿಕಾರಿ ಸಮಾಜ ಸುಧಾರಕ, ವಚನ ಸಾಹಿತ್ಯದ ಮೂಲಕ ಕನ್ನಡ ಸಾಹಿತ್ಯಕ್ಕೆ ಭದ್ರ ಬುನಾದಿ ಹಾಕಿದ ಮಹಾಪುರುಷ. ಕಾಯಕವೇ ಕೈಲಾಸ ಎಂಬ ಮಂತ್ರದಡಿ ಸಮಾನತೆ, ಲಿಂಗಭೇದ ನಿರಾಕರಣೆ ಮತ್ತು ಅಹಿಂಸೆಯನ್ನು ಬೋಧಿಸಿದರು. ಅನುಭವ ಮಂಟಪದ ಮೂಲಕ ಪ್ರಜಾಪ್ರಭುತ್ವದ ಅಡಿಪಾಯ ಹಾಕಿದರು, ಜೈನ ಸಾಹಿತ್ಯ ಕನ್ನಡ ಸಾಹಿತ್ಯದ ಮೇಲೆ ಪ್ರಭಾವ ಬೀರಿ ಕನ್ನಡ ಸಾಹಿತ್ಯದ ವೈಶಿಷ್ಟತೆ ಹೆಚ್ಚಿಸಿದೆ. ಪಂಪ ಹೇಳಿದ ಅರಿವಿನ ವಿಸ್ತಾರವೇ ಧರ್ಮ ಎಂಬುವ ಗುಣವನ್ನು ಬಸವಣ್ಣನಲ್ಲಿ ಕಾಣಬಹುದು. ಅನ್ಯಾಯದ ವಿರುದ್ಧ ಹೇಗೆ ಸಂಘಟಿತರಾಗಬೇಕೆಂಬುದನ್ನು ತಿಳಿಸಿಕೊಟ್ಟವರು ಬಸವಣ್ಣ ಹಾಗೂ ಅಂಬೇಡ್ಕರರಂತವರು. ಶರಣನಾಗುವುದೆಂದರೆ ಸಕಲ ಜೀವರಾಶಿಗಳಿಗೆ ಲೇಸನ್ನು ಬಯಸುವುದು, ಶರಣ ಸಂಕುಲವೆಂದರೆ ಸರ್ವರನ್ನೂ ಸಮಾನತೆಯಿಂದ ಕಾಣುವುದು. ಮೇಲು-ಕೀಳು, ಬಡವ-ಶ್ರೀಮಂತ ಎನ್ನದೆ ಬಸವೇಶ್ವರರಿಂದ 12ನೇ ಶತಮಾನದಲ್ಲಿಯೇ ಕನ್ನಡ ನೆಲದಲ್ಲಿ ಸಮಾನತೆ ಹುಟ್ಟಿತು. ಅವರ ವಚನಗಳನ್ನು, ತತ್ವಗಳನ್ನು ಅಳವಡಿಸಿಕೊಂಡಾಗ ಬಸವ ದರ್ಶನ ಸಾಧ್ಯ. ಇಡೀ ಮಾನವಕುಲದ ಹಿನ್ನಲೆಯಾಗಿ ನೋಡಿದಾಗ ಮಾತ್ರ ಬಸವಣ್ಣನ ಅರ್ಥವಾಗುವುದು ಆತ್ಮವಿಮರ್ಶೆಯಿಂದ ಅದು ಸಾಧ್ಯ ಎಂದು ಹೇಳಿದರು.

ಕೇಂದ್ರ ಸಾಹಿತ್ಯ ಅಕಾದೆಮಿ ಪ್ರಶಸ್ತಿ ಪುರಸ್ಕೃತರಾದ ಡಾ.ಅಮರೇಶ ನುಗಡೋಣಿ ವಾಲ್ಮೀಕಿ ವಿವಿಯ ವತಿಯಿಂದ ಗೌರವ ಸನ್ಮಾನ ಸ್ವೀಕರಿಸಿ ಮಾತನಾಡಿ, ನಾವಿಂದು ಕಲ್ಯಾಣದ ಸಾಧನೆಯನ್ನು ನೆನೆಯಲೇಬೇಕು. ಬಸವಣ್ಣ ಹುಟ್ಟಿದ ನಾಡಲ್ಲಿ ನಾವು ಹುಟ್ಟಿದ್ದೇವೆ ಎನ್ನುವುದೇ ಅಭಿಮಾನ. ಅದರ ಜೊತೆಗೆ ನಾವು ನಿಜವಾಗಿಯೂ ಅವರು ಮತ್ತು ಅವರ ಸಮಕಾಲಿನ ಶರಣರ ನುಡಿಗಳನ್ನು ನಡೆದಿದ್ದೇವೆಯೇ ಎಂಬುದನ್ನು ಅರಿತುಕೊಳ್ಳಬೇಕಾಗಿದೆ. ಶರಣರ ಮನುಕುಲದ ತತ್ವಗಳನ್ನು ಅರಿತು ಜೀವನ ಜಯಿಸಬೇಕಾದ ನಾವು ಸೋಲುತ್ತಿದ್ದೇವೆ ಎಂಬ ವಿಷಯದಿಂದ ಎಚ್ಚೆತ್ತುಕೊಂಡು ಅವರ ಮಾರ್ಗದಲ್ಲಿ ನಡೆದು ಉತ್ತಮ ಜೀವನ ಸಾಗಿಸೋಣ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ವಿವಿಯ ಉಪಕುಲಸಚಿವ ಡಾ. ಕೆ.ವೆಂಕಟೇಶ ಮಾತನಾಡುತ್ತ, ಇದು ಆತ್ಮವಿಮರ್ಶೆ ಮಾಡಿಕೊಳ್ಳುವ ಕಾಲ. ಸಾಮಾಜಿಕ ಕಳಕಳಿ ಹೊತ್ತು ಶೋಷಿತರ, ನೊಂದವರ ಪರವಾಗಿ ನಿಂತವರು ಬಸವಣ್ಣ. ಮೌಢ್ಯ, ಅಂಧಶ್ರದ್ಧೆ, ದುಡಿಯದೇ ಸುಖ ಅನುಭವಿಸುವ ಪದ್ಧತಿಯನ್ನು ಭ್ರಷ್ಟಿಸಿದ್ದು ಅವರೆ. ಸ್ತ್ರೀ ಸಮಾನತೆಯ ಹಕ್ಕನ್ನು ಪ್ರತಿಪಾದಿಸಿದ ಕಾಲ ಅವರದು. ಎಲ್ಲಿ ಹೆಣ್ಣನ್ನು ಗೌರವಿಸುತ್ತಾರೋ ಅಲ್ಲಿ ಸಮಾಜ ಉಸಿರಾಡುತ್ತದೆ ಎಂದರು. ಇಂತಹ ಮಹಾನ್ ಶರಣರ ವಚನಗಳನ್ನು ಮೈಗೂಡಿಸಿಕೊಂಡು ಜೀವನದಲ್ಲಿ ಸಾರ್ಥಕತೆ ಕಾಣೋಣ. ಜ್ಞಾನಾರ್ಜನೆ ನೀಡುವ ಇಂತಹ ಉಪನ್ಯಾಸ ಕಾರ್ಯಕ್ರ ಮಗಳು ಮುಂಬರುವ ದಿನಗಳಲ್ಲಿ ನಮ್ಮ ವಿಶ್ವವಿದ್ಯಾಲಯದಲ್ಲಿ ಇನ್ನು ಹೆಚ್ಚಾಗಿ ಆಯೋಜಿಸಲಾಗುವುದು ಎಂದು ಹೇಳಿದರು.

ವಿವಿಯ ಮೌಲ್ಯಮಾಪನ ಕುಲಸಚಿವ ಪ್ರೊ.ಜ್ಯೋತಿ ಧಮ್ಮ ಪ್ರಕಾಶ್ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಇದೇ ಸಂದರ್ಭದಲ್ಲಿ ಕರ್ನಾಟಕ ಪ್ರಕಾಶಕರ ಸಂಘ ನೀಡುವ 2025-26ನೇ ಸಾಲಿನ ಎಂ.ಗೊಪಾಲಕೃಷ್ಣ ಅಡಿಗ ಪುಸ್ತಕ ಪರಿಚಾರಕ ಪ್ರಶಸ್ತಿಗೆ ಭಾಜನರಾಗಿರುವ ಪಲ್ಲವ ಪ್ರಕಾಶನದ ಡಾ. ಕೆ.ವೆಂಕಟೇಶ್ ಅವರನ್ನು ವಿಶ್ವವಿದ್ಯಾನಿಲಯದ ಉಪನ್ಯಾಸಕ ಬಳಗದವರು ಸನ್ಮಾನಿಸಿದರು.

ವೇದಿಕೆ ಮೇಲೆ ವಿದ್ಯಾರ್ಥಿ ಕಲ್ಯಾಣಾಧಿಕಾರಿಗಳಾದ ಪ್ರೊ.ಪಾರ್ವತಿ ಸಿ.ಎಸ್., ಹಿರಿಯ ಪ್ರಾಧ್ಯಾಪಕರಾದ ಪ್ರೊ.ಪಿ.ಭಾಸ್ಕರ್, ಸಹಪ್ರಾಧ್ಯಾಪಕರಾದ ಡಾ. ಲತಾ.ಎಂ.ಎಸ್, ಎನ್‌ಎಸ್‌ಎಸ್ ಸಂಯೋಜನಾಧಿಕಾರಿಗಳಾದ ಡಾ. ಜಿ.ಎಸ್.ಬಿರಾದಾರ್, ಕಾರ್ಯಕ್ರಮದಲ್ಲಿ ಸೇರಿದಂತೆ ರಾಯಚೂರಿನ ಬಸವ ಕೇಂದ್ರ ಅಧ್ಯಕ್ಷ ಮಹಾಜನ್ ಶೆಟ್ಟಿ, ಕದಳಿ ವೇದಿಕೆ ಅಧ್ಯಕ್ಷೆ ಲಲಿತಾ ಬಸನಗೌಡ,, ಜಾಗತಿಕ ಲಿಂಗಾಯತ ಮಹಾಸಭಾ ಮಹಿಳಾ ಘಟಕದ ಅಧ್ಯಕ್ಷೆ ಡಾ.ಸರ್ವಮಂಗಳ ಸಕ್ರಿ, ಅಕ್ಕನ ಬಳಗದ ಪದಾಧಿಕಾರಿಗಳು ಹಾಗೂ ವಿವಿಯ ವಿವಿಧ ವಿಭಾಗಗಳ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಇತಿಹಾಸ ವಿಭಾಗದ ವಿದ್ಯಾರ್ಥಿನಿ ಸ್ನೇಹಾ ಚವ್ಹಾಣ ವಚನಗೀತೆ ಹಾಡಿದರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಉಪನ್ಯಾಸಕಿ ಡಾ.ಗೀತಮ್ಮ ಸ್ವಾಗತಿಸಿದರು, ಕನ್ನಡ ಅಧ್ಯಯನ ವಿಭಾಗದ ಉಪನ್ಯಾಸಕಿ ಡಾ.ಗೀತಾಂಜಲಿ ನಿರೂಪಿಸಿದರು, ಉಪನ್ಯಾಸಕರಾದ ಡಾ. ರಮೇಶ್ ನಾಯಕ್, ಡಾ. ದಿವ್ಯಾ ಎಸ್. ಆರ್, ನೇಹಾ ಗಸ್ತಿ ಅತಿಥಿಗಳನ್ನು ಪರಿಚಯಿಸಿದರು. ಮಹಿಳಾ ಅಧ್ಯಯನ ವಿಭಾಗದ ಉಪನ್ಯಾಸಕಿ ಡಾ.ಶಾಂತದೇವಿ ವಂದಿಸಿದರು.

# ಪುಸ್ತಕ ಅರಿವಿನ ಮನೆ - ದೀಪಿಕಾ



ಕನ್ನಡ ಮಾತೃ ಭೂಮಿ ವಾರ್ತೆ

**ಶಹಪುರ,ಏ.26-**ನಾವು ಓದುವ ಪುಸ್ತಕಗಳು ಅರಿವಿನ ಮನೆಯ ರಾಜ ಮಾರ್ಗಗಳಾಗಿವೆ ಎಂದು ಭೀಮರಾಯನ ಗುಡಿಯ ಮಹಿಳಾ ಪೊಲೀಸ್ ಪೇದೆ, ದೀಪಿಕಾ ಅವರು ಅಭಿಪ್ರಾಯ ಪಟ್ಟರು.

ಸಗರದ ಕಲಾನಿಕೇತನ ಟ್ರಸ್ಟ್ ವತಿಯಿಂದ ವಿಶ್ವ ಪುಸ್ತಕ ದಿನಾಚರಣೆ ಪ್ರಯುಕ್ತ ಮೊಬೈಲ್ ಬಿಡಿ ಪುಸ್ತಕ ಹಿಡಿ ಎಂಬ ಘೋಷವಾಗಿದೊಂದಿಗೆ ಹಮ್ಮಿಕೊಂಡಿರುವ ವಿಶೇಷ ಅಭಿಯಾನದಲ್ಲಿ ಭಾಗವಹಿಸಿ ಮಾತನಾಡಿ ಪುಸ್ತಕ ಪ್ರೀತಿ, ಅಕ್ಷರಗಳ ಒಡನಾಟ,ಜ್ಞಾನದ ಸಿಂಚನ ಇವೆಲ್ಲವುಗಳು ನಮ್ಮಲ್ಲಿ ಜ್ಞಾನದ ಹೊಸತನವನ್ನು ಕಂಡುಕೊಳ್ಳುವ ದಿವ್ಯ ಔಷಧಿಗಳಾಗಿವೆ ಎಂದು ನುಡಿದರು.

ಶಹಾಪುರ ಪಟ್ಟಣದ ಸಾರ್ವಜನಿಕ ಸ್ಥಳಗಳಾದ ಹೊಸ ಬಸ್ ನಿಲ್ದಾಣ, ಬ್ಯಾಂಕ್, ಪೊಲೀಸ್ ಠಾಣೆ, ಹೋಟೆಲ್ ಹಾಗೂ ಶಾಲಾ ಕಾಲೇಜುಗಳಲ್ಲಿ ಉಚಿತವಾಗಿ ಪುಸ್ತಕ ವಿತರಿಸಿ ಪುಸ್ತಕಗಳು ಓದುವುದರಿಂದ ಮನುಷ್ಯನ ಬೌದ್ಧಿಕ ಮಟ್ಟ ಹೆಚ್ಚಾಗುತ್ತದೆ ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಟ್ರಸ್ಟ್ ಅಧ್ಯಕ್ಷ ಬಸವರಾಜ ಶಿಣ್ಣೂರ, ತಿಪ್ಪಣ್ಣ ಕ್ಯಾತನಳ ಹನುಮಂತ್ ಪೊಲೀಸ್, ಮಂಜುನಾಥ ಸ್ವಾಮಿ ಪೊಲೀಸ್,

ಮಂಜು ಮಲ್ಲೇದ ಪೊಲೀಸ್, ಚಂದ್ರು ಪೊಲೀಸ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು,ಈ ಸಂದರ್ಭದಲ್ಲಿ ಸುಮಾರು 250 ಕ್ಕೂ ಹೆಚ್ಚು ಮೌಲ್ಯಯುತ ಪುಸ್ತಕಗಳನ್ನು ಉಚಿತವಾಗಿ ನೀಡಿ ಪುಸ್ತಕ ಪ್ರೇಮ ಮೆರೆಯಲಾಯಿತು.

# ಡಾ.ರಾಜಕುಮಾರ ಬಹುಮುಖ ಪ್ರತಿಭೆ-ಶಿವಾನಂದ ಕರಾಳೆ

ಕನ್ನಡ ಮಾತೃ ಭೂಮಿ ವಾರ್ತೆ

**ಬೀದರ, ಏ.26-**ಡಾ. ರಾಜ್‌ಕುಮಾರ್ ಅವರು ಕೇವಲ ಒಬ್ಬ ನಟರಾಗಿರದೆ, ಅದ್ಭುತ ಗಾಯಕರಾಗಿ, ಸಮಾಜ ಸೇವಕರಾಗಿ ಗುರುತಿಸಿಕೊಂಡಿದ್ದರು. ಸಂಗೀತ ಕ್ಷೇತ್ರದಲ್ಲಿನ ಅವರ ಮಾಡಿದ ಸಾಧನೆಗಾಗಿ ಅವರಿಗೆ ರಾಷ್ಟ್ರಮಟ್ಟದ ಪ್ರಶಸ್ತಿ ಲಭಿಸಿವೆ ಎಂದು ಅಪರ ಜಿಲ್ಲಾಧಿಕಾರಿ ಶಿವಾನಂದ ಕರಾಳೆ ಹೇಳಿದರು.

ಅವರು ಶುಕ್ರವಾರ ಜಿಲ್ಲಾಡಳಿತ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಕರ್ನಾಟಕ ಸಾಹಿತ್ಯ ಸಂಘ ಬೀದರ ಇವರ ಸಂಯುಕ್ತಾಶ್ರಯದಲ್ಲಿ ಡಾ. ರಾಜಕುಮಾರ ರವರ 97ನೇ ಜಯಂತಿ ಅಂಗವಾಗಿ ಆಯೋಜಿಸಿದ ರಾಜರಸ ಸಂಗೀತ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕನ್ನಡ ಭಾಷೆಯ ಉಳಿವಿಗಾಗಿ ನಡೆದ ಐತಿಹಾಸಿಕ ಗೋಕಾಕ್ ಚಳವಳಿಯಲ್ಲಿ ಡಾ. ರಾಜ್‌ಕುಮಾರ್ ಅವರ ಪಾತ್ರ ಅನನ್ಯವಾದುದು. ಅವತ್ತು ಅವರು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ನೀಡಿದ ಸಹಕಾರದಿಂದ ಚಳವಳಿಗೆ ದೊಡ್ಡ ಶಕ್ತಿ ಬಂದಿತ್ತು. ರಾಜ್ ಅವರ ಕಲಾ ಸೇವೆಗಾಗಿ ಅವರಿಗೆ ಅನೇಕ ರಾಜ್ಯ ಹಾಗೂ ರಾಷ್ಟ್ರಮಟ್ಟದ ಪ್ರಶಸ್ತಿ ಲಭಿಸಿವೆ. ಅವರು ಇಂದಿನ ಸಮಾಜಕ್ಕೆ ದಾರಿದೀಪವಾಗಿದ್ದಾರೆ ಎಂದರು.




ಡಾ. ರಾಜಕುಮಾರ ಅವರ ಜೀವನ ಚರಿತ್ರೆ ಕುರಿತು ವಿಶೇಷ ಉಪನ್ಯಾಸ ನೀಡಿದ ಜಗನ್ನಾಥ ಹೆಬ್ಬಾಳೆ ಅವರು, ಕನ್ನಡ ಚಿತ್ರರಂಗದ ಧ್ರುವತಾರೆ ಡಾ. ರಾಜ್ ಕುಮಾರ್ ಅವರು ಕೇವಲ ಒಬ್ಬ ನಟರಾಗಿರದೆ, ಸಮಾಜದ ಏಳಿಗೆಗಾಗಿ ಶ್ರಮಿಸಿದ ಮಹಾನ್ ಸುಧಾರಕರು. ಪೌರಾಣಿಕ ಮತ್ತು ಸಾಮಾಜಿಕ ಚಿತ್ರಗಳ ಮೂಲಕ ಜನಮನ ಗೆದ್ದಿದ್ದ ಅವರು, ನಟನೆಯ ಜೊತೆಗೆ ಸಂಗೀತ ಕ್ಷೇತ್ರದಲ್ಲಿಯೂ ರಾಷ್ಟ್ರಮಟ್ಟದ ಸಾಧನೆ ಮಾಡಿರುವುದು ಅವಿಸ್ಮರಣೀಯ. ನಾಡು-ನುಡಿಯ ರಕ್ಷಣೆಗಾಗಿ ಹೋರಾಡಿದ ಅವರ ನಾಯಕತ್ವದ ಗುಣ ಶ್ಲಾಘನಿಯವಾದದ್ದು. ಕಲೆ ಮತ್ತು ಸಮಾಜ ಸೇವೆಯನ್ನು ಸಮನಾಗಿ ತೂಗಿಸಿದ ಅಣ್ಣಾವ್ರ, ಜೀವನ ಮೌಲ್ಯಗಳು ಇಂದಿನ ತಲೆಮಾರಿಗೆ ದಾರಿದೀಪವಾಗಿವೆ ಎಂದರು.

ಅತಿಥಿ ಉಪನ್ಯಾಸ ನೀಡಿ ಮಾತನಾಡಿದ ಕರ್ನಾಟಕ ಪದವಿ ಪೂರ್ವ ಕಾಲೇಜಿನ ಡಾ. ಬಸವರಾಜ್ ಬಲ್ಲೂರ್, ರಾಜ್‌ಕುಮಾರ್ ಅವರು ತಮ್ಮ ನಟನೆಯ ಮೂಲಕ ಸಮಾಜದಲ್ಲಿದ್ದ ಅಂಕುಡೊಂಕುಗಳನ್ನು ತಿದ್ದುವ ಕೆಲಸ ಮಾಡಿದ್ದಲ್ಲದೆ, ಗೋಕಾಕ್ ಚಳವಳಿಯಂತಹ ಸಾಂಸ್ಕೃತಿಕ ಹೋರಾಟಗಳ ಮೂಲಕ ನಾಡು-ನುಡಿಯ ರಕ್ಷಣೆಗೆ ಬದ್ಧರಾಗಿದ್ದರು. ಕಲಾವಿದರು ಸಾಮಾಜಿಕ ಜವಾಬ್ದಾರಿಯನ್ನು ಹೊಂದಿರಬೇಕು ಎಂಬುವುದನ್ನು ಅಣ್ಣಾವ್ರು ತೋರಿಸಿಕೊಟ್ಟಿದ್ದರು. ಡಾ. ರಾಜ್ ಅವರ ಸರಳತೆ ಮತ್ತು ಮೌಲ್ಯಯುತ ಜೀವನ ಇಂದಿನ ಸಮಾಜಕ್ಕೆ ಆದರ್ಶಪ್ರಾಯವಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕ ಮಂಜುನಾಥ್ ಸುಳ್ಳೊಳ್ಳಿ,

ಸಂಜೆ ಅಂತರಅಗ ಸುದ್ದಿ ದಿನಪತ್ರಿಕೆಯ ಸಂಪಾದಕ ಮಾಳಪ್ಪ ಅಡಸಾರೆ, ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯ ವಿಜಯಕುಮಾರ ಸೋನಾರೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಗ್ರಂಥಪಾಲಕ ತನ್ವೀರ್ ಇಕ್ಬಾಲ್, ಸಿನಿ ಚಾಲಕ ವಿಜಯಕೃಷ್ಣ ಸೋಲಪುರ, ಆಶೀಶ್ ಹಜಾರೆ, ಗೀತಾಬಾಯಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಶೇಕಡಾವಾರು ಪ್ರಮಾಣ ಹೆಚ್ಚಳ ಆಗಿರುವುದೇ ಸಾಧನೆಯಾಗದಿರಲಿ ಸರ್ಕಾರ ಮೂಲಸೌಕರ್ಯ, ಶಿಕ್ಷಕರನ್ನು ಒದಗಿಸಲಿ: ಚಾಮನಳ್ಳಿ

ಕನ್ನಡ ಮಾತೃ ಭೂಮಿ ವಾರ್ತೆ

**ಯಾದಗಿರಿ,ಏ.26-** ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಗಿರಿ ಜಿಲ್ಲೆಯ ವಿದ್ಯಾರ್ಥಿಗಳ ಶೇಕಡಾ ವಾರು ಪ್ರಮಾಣ ಹೆಚ್ಚಳವಾಗಿರುವುದು ಸಂತಸದ ಸಂಗತಿಯಾಗಿದ್ದರೂ ಕೊನೆ ಸ್ಥಾನ ಅಬಾಧಿತವಾಗಿರುವುದು ಬೇಸರದ ಸಂಗತಿಯಾಗಿದೆ. ಕೂಡಲೇ ಸರ್ಕಾರ ಗುಣಮಟ್ಟದ ಶಿಕ್ಷಣದ ಕಡೆಗೆ ಗಮನ ಹರಿಸಬೇಕು ಎಂದು ಯುವಕೋಲಿ ಸಮಾಜದ ತಾಲ್ಲೂಕು ಅಧ್ಯಕ್ಷ ಮುದುಕಪ್ಪ ಚಾಮನಳ್ಳಿ ಒತ್ತಾಯಿಸಿದ್ದಾರೆ.

ಈ ಕುರಿತು ಹೇಳಿಕೆ ನೀಡಿರುವ ಅವರು ಕಳೆದ ಬಾರಿ ಶೇ. 62 ರಷ್ಟು ಫಲಿತಾಂಶ ಸಾಧಿಸಿದ್ದರೆ ಈ ಬಾರಿ ಶೇ. 91 ರಷ್ಟು ಫಲಿತಾಂಶ ಸಾಧನೆ ಮಾಡಿರುವುದು ಸಮಾಧಾನ ತಂದಿದೆ ಆದರೂ ಹೊಸ ಶಿಕ್ಷಣ ನೀತಿಯ ಹೆಸರಿನಲ್ಲಿ ಸರ್ಕಾರ ಪಾಸಿಂಗ್ ಅಂಕಗಳನ್ನು 13ಕ್ಕೆ ಇಳಿಸಿರುವುದು ಒಂದು ಈ ಫಲಿತಾಂಶದ ಹೆಚ್ಚಳಕ್ಕೆ ಕಾರಣವಾಗಿದೆ.

ಆದರೆ ಎಂದಿನಂತೆ ಕಳೆದ ವರ್ಷ 31 ನೇ ಸ್ಥಾನದಲ್ಲಿದ್ದ ಜಿಲ್ಲೆಯು ಈ ಬಾರಿಯೂ 31 ರಲ್ಲೇ ಇರುವುದು ನೋವಿನ ಕೂಡಲೇ ಸರ್ಕಾರ ಶಿಕ್ಷಕರನ್ನು ಒದಗಿಸಬೇಕು ಸರ್ಕಾರಿ ಶಾಲೆಗಳನ್ನು ಮುಚ್ಚುವದು ಕೈ ಬಿಡಬೇಕು, ಮೂಲಸೌಕರ್ಯಗಳನ್ನು ಒದಗಿಸಬೇಕು ಗುಣಾತ್ಮಕ ಶಿಕ್ಷಣಕ್ಕೆ ಒತ್ತು ನೀಡಬೇಕು ಎಂದು ಅವರು ಸರ್ಕಾರಕ್ಕೆ ಒತ್ತಾಯಿಸಿದ್ದಾರೆ.

# ರಾಜಯೋಗವೇ ಶ್ರೇಷ್ಠ ಯೋಗ ಮಾನಸಿಕ ಆರೋಗ್ಯವೇ ಜೀವನದ ಶಕ್ತಿ



ಕನ್ನಡ ಮಾತೃ ಭೂಮಿ ವಾರ್ತೆ

**ಬೀದರ,ಏ.26-**ಯೋಗಗಳಲ್ಲಿ ಶ್ರೇಷ್ಠವಾದ ಯೋಗ ರಾಜಯೋಗವಾಗಿದ್ದು, ಶಾರೀರಿಕ ಸ್ವಾಸ್ಥ್ಯದ ಜೊತೆಗೆ ಮಾನಸಿಕ ಆರೋಗ್ಯವೂ ಅತ್ಯಂತ ಮುಖ್ಯವಾಗಿದೆ ಎಂದು ಪ್ರಜಾಪಿತಾ ಬ್ರಹ್ಮಾಕುಮಾರಿಸ್ ಈಶ್ವರಿಯ ವಿಶ್ವವಿದ್ಯಾಲಯ ರಾಜಯೋಗ ಕೇಂದ್ರ ಪಾವನಧಾಮದ ಸಂಚಾಲಕಿ ಬಿ.ಕೆ ಪ್ರತಿಮಾ ಬಹೆನ್‌ಜಿ ಹೇಳಿದರು.

ನಗರದ ಜನವಾಡ ರಸ್ತೆಯಲ್ಲಿರುವ ಬ್ರಹ್ಮಾಕುಮಾರಿಸ್ ಕೇಂದ್ರ ಪಾವನಧಾಮ ಆವರಣದಲ್ಲಿ ಇತ್ತೀಚೆಗೆ ನಡೆದ ಯೋಗ ಮಹೋತ್ಸವ ಕಾರ್ಯಕ್ರಮದಲ್ಲಿ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು, ಆತ್ಮ ಸಶಕ್ತವಾಗಲು ಪ್ರಕೃತಿ ಸಮತೋಲನ ಅಗತ್ಯವಾಗಿದೆ ಎಂದರು.

ಯುವಜನತೆ ದೇಶದ ಶಕ್ತಿ ಆಗಿರುವುದರಿಂದ ಅವರ ಮಾನಸಿಕ ಆರೋಗ್ಯ ಬಲವಾಗಿರಬೇಕು. ಪರಮಾತ್ಮನ ಸಾನಿಧ್ಯದಲ್ಲಿ ಇರುವುದರಿಂದ ಆತ್ಮಚಿಂತನೆ ಮತ್ತು ಅಧ್ಯಾತ್ಮಿಕ ಶಕ್ತಿ ವೃದ್ಧಿಯಾಗುತ್ತದೆ ಎಂದು ಹೇಳಿದರು.

ಬ್ರಹ್ಮಾಕುಮಾರಿ ಕೇಂದ್ರದಿಂದ ಸನ್ಮಾನಿತರಾಗಿ ಮಾತನಾಡಿದ ಯೋಗಗುರು ಗೋರಖನಾಥ ಕುಂಬಾರ, ಯೋಗ ಮಹೋತ್ಸವದ ಮೂಲಕ ಈ ಭಾಗದಲ್ಲಿ ಯೋಗಮಯ ವಾತಾವರಣ ನಿರ್ಮಿಸಿ ಯುವಜನರಲ್ಲಿ ಯೋಗದ ಅರಿವು ಮೂಡಿಸುವ ಉದ್ದೇಶದಿಂದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು. ಪತಂಜಲಿ ಮಹರ್ಷಿಗಳು ಭಾರತದಲ್ಲಿ ಯೋಗವನ್ನು ಪ್ರಚಾರ ಮಾಡಿದ್ದು, ಇದೀಗ ಬಾಬಾ ರಾಮದೇವ ಅವರ ಮೂಲಕ ಅದು ಮುಂದುವರಿಯುತ್ತಿದೆ ಎಂದು ಹೇಳಿದರು.

ಕಾರ್ಯಕ್ರಮಕ್ಕೆ ಸಹಕಾರ ನೀಡಿದ ಬ್ರಹ್ಮಾಕುಮಾರಿ ಕೇಂದ್ರಕ್ಕೆ ಕೃತಜ್ಞತೆ ಸಲ್ಲಿಸಿದರು. ಅಕ್ಕಪಡೆಯ ರಾಜ್ಯ ಸಂಯೋಜಕಿ ಶೈನಿ ಗುಂಟಿ ಮಾತನಾಡಿ, ಯುವಜನತೆಗೆ ಅಧ್ಯಾತ್ಮಿಕ ಶಿಕ್ಷಣ ಅಗತ್ಯವಿದೆ. ಅಪರಾಧಮುಕ್ತ ಸಮಾಜ ನಿರ್ಮಾಣಕ್ಕೆ ಯುವಕರು ಅಧ್ಯಾತ್ಮದತ್ತ ಮುಖ ಮಾಡಬೇಕು ಎಂದು ಕರೆ ನೀಡಿದರು.

ಸ್ವದೇಶಿ ಎನರ್ಜಿ ಫೌಂಡೇಷನ್ ಅಧ್ಯಕ್ಷ ಆನಂದ ರಡ್ಡಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕೇಂದ್ರದ ಹಿರಿಯ ರಾಜಯೋಗ ಶಿಕ್ಷಕಿ ಬಿ.ಕೆ ಗುರುದೇವಿ ಅಕ್ಕನವರು ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು. ಕೇಂದ್ರದ ಸಹೋದರ-ಸಹೋದರಿಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಕಮಲನಗರ ಡಾ. ಚನ್ನಬಸವ ಪಟ್ಟದ್ದೇವರ ಶಾಲೆ

# ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಮಿಂಚು : ರಾಜ್ಯಕ್ಕೆ 8ನೇ ಸ್ಥಾನ

ಕನ್ನಡ ಮಾತೃ ಭೂಮಿ ವಾರ್ತೆ

**ಕಮಲನಗರ,ಏ.26-**ಶಿಕ್ಷಣ ಕ್ಷೇತ್ರದಲ್ಲಿ ಮತ್ತೊಮ್ಮೆ ತನ್ನ ಶ್ರೇಷ್ಠತೆಯನ್ನು ಸಾಬೀತುಪಡಿಸಿರುವ ಪಟ್ಟಣದ ಡಾ. ಚನ್ನಬಸವ ಪಟ್ಟದ್ದೇವರ ಪ್ರೌಢ ಶಾಲೆ, 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ-01ರಲ್ಲಿ ಶೇ.100 ಫಲಿತಾಂಶ ದಾಖಲಿಸಿ ಗಮನ ಸೆಳೆದಿದೆ. ಈ ಸಾಧನೆಯೊಂದಿಗೆ ಶಾಲೆ ಶಿಕ್ಷಣ ವಲಯದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿದೆ.

ಶಾಲೆಯ ವಿದ್ಯಾರ್ಥಿನಿ ಅಮೃತಾ ವಿನೋದಕುಮಾರ್ 618 (98.88%) ಅಂಕಗಳನ್ನು ಪಡೆದು ರಾಜ್ಯ ಮಟ್ಟದಲ್ಲಿ 8ನೇ ಸ್ಥಾನ ಗಳಿಸಿ ಶಾಲೆಗೆ ಕೀರ್ತಿ ತಂದಿದ್ದಾರೆ. ಈಶ್ವರ ಅನೀಲ್ ಕುಮಾರ್ 607 (97.12%), ಚೈತನ್ಯ ಪ್ರೇಮಸಾಗರ 601 (96.16%), ಚೇತನಾ ವೆಂಕಟ್



ಹಾಗೂ ಮಹೇಶ್ವರಿ ಅವಿನಾಶ ತಲಾ 597 (95.52%) ಅಂಕಗಳನ್ನು ಪಡೆದು ಅತ್ಯುತ್ತಮ ಸಾಧನೆ ಮಾಡಿದ್ದಾರೆ.

ಭಾಗ್ಯಶ್ರೀ ಸಂಜೀವ 591 (94.56%), ಅಂಜಲಿ ಭೀಮಾಶಂಕರ ಹಾಗೂ ಶ್ರೀಷ್ಟಿ ಗುರುನಾಥ ತಲಾ 586 (93.76%) ಅಂಕಗಳನ್ನು ಪಡೆದು ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ವಿದ್ಯಾರ್ಥಿಗಳ ಒಟ್ಟಾರೆ ಪ್ರದರ್ಶನ ಶಾಲೆಯ ಶಿಸ್ತು ಹಾಗೂ ಗುಣಮಟ್ಟದ ಬೋಧನೆಯನ್ನು ಪ್ರತಿಬಿಂಬಿಸುತ್ತದೆ.

ಒಟ್ಟು 80 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿ, ಎಲ್ಲರೂ ಉತ್ತೀರ್ಣರಾಗಿದ್ದು ಶೇ.100 ಫಲಿತಾಂಶ ದಾಖಲಾಗಿದೆ. ಇವರಲ್ಲಿ 31 ವಿದ್ಯಾರ್ಥಿಗಳು ಅಗ್ರಶ್ರೇಣಿಯಲ್ಲಿ ಹಾಗೂ 49 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ವಿಷಯವಾರು ಸಾಧನೆಯಲ್ಲಿ ಕನ್ನಡದಲ್ಲಿ 125ಕ್ಕೆ 125 ಅಂಕ ಪಡೆದ 1 ವಿದ್ಯಾರ್ಥಿ, ಹಿಂದಿಯಲ್ಲಿ 100ಕ್ಕೆ 100 ಅಂಕ ಪಡೆದ 11 ವಿದ್ಯಾರ್ಥಿಗಳು, ವಿಜ್ಞಾನದಲ್ಲಿ 1 ವಿದ್ಯಾರ್ಥಿ ಹಾಗೂ ಸಮಾಜ ವಿಜ್ಞಾನದಲ್ಲಿ 8 ವಿದ್ಯಾರ್ಥಿಗಳು ಶತಪ್ರತಿಶತ ಅಂಕಗಳನ್ನು ಗಳಿಸಿದ್ದಾರೆ.

ಈ ಸಾಧನೆಗೆ ಡಾ. ಚನ್ನಬಸಪ್ಪ ದೇವರ ಅವರು ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಆಡಳಿತ ಮಂಡಳಿಯನ್ನು ಅಭಿನಂದಿಸಿ, ಮುಂದಿನ ದಿನಗಳಲ್ಲಿಯೂ ಇದೇ ರೀತಿಯ ಸಾಧನೆ ಮುಂದುವರಿಯಲಿ ಎಂದು ಹಾರೈಸಿದರು. ಸಂಸ್ಥೆಯ ಅಧ್ಯಕ್ಷ ರಾದ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು, ಗುರುಬಸವ ಪಟ್ಟದ್ದೇವರು, ಆಡಳಿತಾಧಿಕಾರಿ ಮೋಹನ್ ರೆಡ್ಡಿ ಹಾಗೂ ಸಿಬ್ಬಂದಿ ವರ್ಗವೂ ಹರ್ಷ ವ್ಯಕ್ತಪಡಿಸಿದ್ದಾರೆ.

# ರಾಜ್ಯಮಟ್ಟದ ವಿಚಾರ ಸಂಕಿರಣ ನಾಳೆ ಹುಬ್ಬಳ್ಳಿಯಲ್ಲಿ ಅಹಿಂದ-25 ಸ್ಮರಣಾರ್ಥ ಕಾರ್ಯಕ್ರಮ

**ಶಹಾಪುರ: ಏ.24-**

ಅಹಿಂದ ಚಳುವಳಿಗೆ 25 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಏಪ್ರಿಲ್ 26ರಂದು ಹುಬ್ಬಳ್ಳಿ ವಿಮಾನ ನಿಲ್ದಾಣ ರಸ್ತೆಯಲ್ಲಿರುವ ರಾಯಲ್ ರೀಟಿಜ್ ಹೋಟೆಲ್ ನಲ್ಲಿ ಅಹಿಂದ-25' ಸ್ಮರಣಾರ್ಥ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಆಯೋಜಿಸಲಾಗಿದೆ ಎಂದು ಅಹಿಂದ ತಾಲೂಕು ಅಧ್ಯಕ್ಷ ಶೇಖರ ದೊರೆ ಕಕ್ಕಸಗೇರಾ ತಿಳಿಸಿದ್ದಾರೆ.

ಈ ಸಮಾವೇಶಕ್ಕೆ ತಾಲೂಕಿನಿಂದ ನೂರಾರು ಸಂಖ್ಯೆಯಲ್ಲಿ ಅಹಿಂದ ವರ್ಗದವರು ತೆರಳುತ್ತಿದ್ದಾರೆ. ಇದಲ್ಲದೇ ಜಿಲ್ಲೆಯ ಎಲ್ಲ ತಾಲೂಕಗಳಿಂದ ಅಪಾರ ಸಂಖ್ಯೆಯಲ್ಲಿ ಜನರು ಆಗಮಿಸಲಿದ್ದಾರೆ ಎಂದು ಹೇಳಿದ್ದಾರೆ.

ಸುಮಾರು 25 ವರ್ಷಗಳ ಹಿಂದೆ ರಾಜ್ಯದಲ್ಲಿ ಆರಂಭವಾದ ಅಹಿಂದ ಚಳುವಳಿ ಹಿಂದುಳಿದ, ಅಲ್ಪಸಂಖ್ಯಾತ ಹಾಗೂ ದಲಿತ ಸಮುದಾಯಗಳಿಗೆ ರಾಜಕೀಯ ಮತ್ತು ಸಾಮಾಜಿಕ ಶಕ್ತಿ ನೀಡುತ್ತಾ ಬಂದಿದೆ. ಈ ಚಳುವಳಿಯ ಹೋರಾಟ ಹಾಗೂ ಸಾಧನೆಗಳನ್ನು ಅವಲೋಕಿಸಿ, ಪ್ರಸ್ತುತ ಸವಾಲುಗಳಿಗೆ ಹೊಸ ಸಂಕಲ್ಪ ಕೈಗೊಳ್ಳುವ ಉದ್ದೇಶದಿಂದ ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ. ಸಂವಿಧಾನದ ಸಂರಕ್ಷಣೆ, ಸಾಮಾಜಿಕ ನ್ಯಾಯ ಹಾಗೂ ಸಮುದಾಯಗಳ ಐಕ್ಯತೆ ಬಲಪಡಿಸುವ ನಿಟ್ಟಿನಲ್ಲಿ ಹಿರಿಯ ನಾಯಕರು, ಯುವ ಮುಖಂಡರು ಮತ್ತು ವಿವಿಧ ಕ್ಷೇತ್ರಗಳ ಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಭಾಗವಹಿ ಸಲಿದ್ದಾರೆ.

# ವಚನಾಮೃತ ಕನ್ನಡ ಸಂಘದಿಂದ ಆಯೋಜನೆ : ಬಸವ ಜಯಂತಿ ಉತ್ಸವ

ಕನ್ನಡ ಮಾತೃ ಭೂಮಿ ವಾರ್ತೆ

**ಬೀದರ,ಏ.26-**ವಚನಾಮೃತ ಕನ್ನಡ ಸಂಘದಿಂದ ನಗರದ ಪೂಜ್ಯ ಚನ್ನಬಸವ ಪಟ್ಟದ್ದೇವರು ರಂಗ ಮಂದಿರದಲ್ಲಿ ಏ. 26 ರಂದು ಬಸವ ಜಯಂತಿ ಉತ್ಸವ ಆಯೋಜಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಪ್ರೊ. ಸಿದ್ರಾಮಪ್ಪ ಮಾಸಿಮಾಡೆ ತಿಳಿಸಿದ್ದಾರೆ.

ಬೆಳಿಗ್ಗೆ 10.30ಕ್ಕೆ ನಡೆಯಲಿರುವ ಸಮಾರಂಭದಲ್ಲಿ ಕಲಬುರಗಿಯ ಸಂಸ್ಕ7ತಿ ಚಿಂತಕಿ ಡಾ. ಕಾವ್ಯಶ್ರೀ ಮಹಾಗಾಂವಕರ್ ಉತ್ಸವವನ್ನು ಉದ್ಘಾಟಿಸುವರು.

ಬಸವ ಸೇವಾ ಪ್ರತಿಷ್ಠಾನದ ಅಧ್ಯಕ್ಷೆ



ಡಾ. ಗಂಗಾಂಬಿಕೆ ಅಕ್ಕ ಸಾನಿಧ್ಯ, ಸಂಘದ ಅಧ್ಯಕ್ಷ ಪ್ರೊ. ಸಿದ್ರಾಮಪ್ಪ ಮಾಸಿಮಾಡೆ ಅಧ್ಯಕ್ಷತೆ ವಹಿಸುವರು ಎಂದು ಹೇಳಿದ್ದಾರೆ.

ಮುಖ್ಯ ಅತಿಥಿಗಳಾಗಿ ಎನ್.ಎಸ್. ಎಸ್.ಕೆ. ಅಧ್ಯಕ್ಷ ಸೂರ್ಯಕಾಂತ ನಾಗಮಾರಪಳ್ಳಿ, ಸ್ವಾಗತ ಸಮಿತಿ ಅಧ್ಯಕ್ಷ ಹಾವಶೆಟ್ಟಿ ಪಾಟೀಲ, ಪ್ರಮುಖರಾದ ಡಾ. ರಜನೀಶ್ ವಾಲಿ, ಗುರಮ್ಮ ಸಿದ್ದಾರೆಡ್ಡಿ, ನಾಗರಾಜ ಕರ್ಪೂರ, ಡಾ. ವಿ.ಎಂ. ಚನಶೆಟ್ಟಿ, ರೇವಣಸಿದ್ದಪ್ಪ ಜಲಾದೆ, ಡಾ. ರಮೇಶ ಮೂಲಗೆ, ಸಿದ್ದಪ್ಪ ಜ್ಯಾಂತೆ, ರಾಜಶೇಖರ ಮಂಗಲಗಿ, ಸಂಗಮೇಶ ನಾಸಿಗಾರ ಪಾಲ್ಗೊಳ್ಳುವರು ಎಂದು ತಿಳಿಸಿದ್ದಾರೆ.

ನಾಟ್ಯಶ್ರೀ ನೃತ್ಯಾಲಯದ ಕಲಾವಿದರು ನೃತ್ಯಾಲಯದ ಅಧ್ಯಕ್ಷೆ ರಾಣಿ ಸತ್ಯಮೂರ್ತಿ ಅವರ ನಿರ್ದೇಶನದಲ್ಲಿ ಭರತನಾಟ್ಯ ಪ್ರಸ್ತುತಪಡಿಸುವರು ಎಂದು ಹೇಳಿದ್ದಾರೆ.

ಮಧ್ಯಾಹ್ನ 1.30ಕ್ಕೆ ಸಾಹಿತಿ ಭಾಗೀರಥಿ ಕೊಂಡಾ ಅವರ ಅಧ್ಯಕ್ಷತೆಯಲ್ಲಿ ಗೋಷ್ಠಿ 1, ಮಧ್ಯಾಹ್ನ 3.30ಕ್ಕೆ ಸಾಹಿತಿ ಸುನಿತಾ ದಾಡಗೆ ಅಧ್ಯಕ್ಷತೆಯಲ್ಲಿ ಗೋಷ್ಠಿ 2, ಸಂಜೆ 5.30ಕ್ಕೆ ಸಾಹಿತಿ ಡಾ. ವಿದ್ಯಾವತಿ ಬಲ್ಲೂರ ಅಧ್ಯಕ್ಷತೆಯಲ್ಲಿ ಕವಿಗೋಷ್ಠಿ ಜರುಗಲಿವೆ.

ಸಂಜೆ 6.30ಕ್ಕೆ ಸನ್ಮಾನ ಹಾಗೂ ಸಮಾರೋಪ ಸಮಾರಂಭ ನಡೆಯಲಿದೆ ಎಂದು ಹೇಳಿದ್ದಾರೆ.

ಬಸವಾನುಯಾಯಿಗಳು, ಸಾಹಿತ್ಯಾಸಕ್ತರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದ್ದಾರೆ.

# ...ಮೊದಲನೇ ಪುಟದಿಂದ

## ಸಮಯ ಬಂದಾಗ ಎಲ್ಲವೂ ಗೊತ್ತಾಗುತ್ತದೆ ಹೈಕಮಾಂಡ್ ಮೇಲೆ ಸಂಪೂರ್ಣ ವಿಶ್ವಾಸ

ವಿರುದ್ಧ ಪಾಲಿಕೆ ವತಿಯಿಂದ ಕ್ರಮ ಜರುಗಿಸಲು ಸೂಚಿಸುತ್ತೇನೆ. ಅವಶ್ಯಕತೆ ಇದ್ದಲ್ಲಿ ಹಣ ಪಾವತಿಸಿ ಜಾಹೀರಾತು ಕೊಡಬಹುದು. ರಸ್ತೆಯಲ್ಲಿ ಫ್ಲೆಕ್ಸ್ ಹಾಕಿ ರಸ್ತೆಯ ಸೌಂದರ್ಯ ಹಾಳು ಮಾಡಬಾರದು. ಇದು ನಾನು ಎಲ್ಲರಿಗೂ ಕೊಡುತ್ತಿರುವ ಸೂಚನೆ. ಅನಧಿಕೃತವಾಗಿ ರಸ್ತೆಯಲ್ಲಿ ಫ್ಲೆಕ್ಸ್ ಹಾಕಿದರೆ ದುಬಾರಿ ದಂಡ ವಿಧಿಸಿ ಎಂದು ಆಯುಕ್ತರಿಗೆ ಸೂಚಿಸಿದ್ದೇನೆ ಎಂದು ತಿಳಿಸಿದರು.

ಕೊಟ್ಟ ಮಾತಿನಂತೆ ಒಳಮೀಸಲಾತಿ ನೀಡಿದ್ದೇವೆ : ಒಳಮೀಸಲಾತಿ ವಿಚಾರವಾಗಿ ಬಿಜೆಪಿ ಟೀಕೆ ಬಗ್ಗೆ ಕೇಳಿದಾಗ, ಬಿಜೆಪಿಯವರ ಕೈಯಲ್ಲಿ ಏನೂ ಮಾಡಲು ಆಗಿಲ್ಲ. ನಾವೇನು ಮಾತು ಕೊಟ್ಟಿದ್ದೆವೋ ಆ ಮಾತಿನ ಪ್ರಕಾರ ನಡೆದಿದ್ದೇವೆ. ಹಿಂದೆ 17% ಇದ್ದಾಗಲೂ ಕೂಡ ನಾವು ಸರಿಯಾಗಿಯೇ ಮಾಡಿದ್ದೆವು. ಈಗಲೂ ಕೂಡ ಬಹಳ ಸರಳವಾಗಿ ಮಾಡಿದ್ದೇವೆ. ಬಲ ಹಾಗೂ ಎಡ ಪಂಗಡಗಳಲ್ಲಿ ಮೊದಲು ಯಾರಿಗೆ, ನಂತರ ಯಾರಿಗೆ ಎಂಬ ಪ್ರಶ್ನೆ ಇತ್ತು. ಅದಕ್ಕೆ ಬೇಕಾದ ಪರಿಹಾರ ದಾರಿ ಕಂಡು ಹಿಡಿಯಲಾಗಿದೆ. ಬಲವಿರಲಿ, ಎಡವಿರಲಿ, ಲಂಬಾಣಿ ಇರಲಿ, ಬೋವಿ ಇರಲಿ ಎಲ್ಲರಿಗೂ ನ್ಯಾಯ ಒದಗಿಸುವ ಕೆಲಸವನ್ನು ನಮ್ಮ ಸರ್ಕಾರ ಮಾಡಿದೆ. 30- 40 ವರ್ಷಗಳಿಂದ ಇದ್ದಂತಹ ಸಮಸ್ಯೆಯನ್ನು ನಾವು ಪರಿಹರಿಸಿದ್ದೇವೆ. ಎಲ್ಲರಿಗೂ ನ್ಯಾಯ ಕೊಡುತ್ತಿದ್ದೇವೆ. ಎಲ್ಲರೂ ಒಟ್ಟಾಗಿ ಹೋಗಬೇಕು ಅಷ್ಟೇ ಎಂದರು. ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮದ ಬಗ್ಗೆ ಕೇಳಿದಾಗ, ಟರಾಜಕೀಯಕ್ಕೆ ವಿದಾಯ ಹೇಳಬೇಕಲ್ಲವೇ, ಅವರ ಸಾಧನೆಗಳನ್ನು, ವಿದಾಯವನ್ನು ಅವರೇ ಹೇಳಬೇಕಲ್ಲವೇ?. ಅದಕ್ಕೆ ಈ ಕಾರ್ಯಕ್ರಮ ಮಾಡುತ್ತಿದ್ದಾರೆ. ಅವರ ಪಕ್ಷಕ್ಕೆ ಏನಾದರೂ ಕೊಡುಗೆ ಕೊಡಬೇಕಲ್ವಾ, ಅದಕ್ಕಾಗಿ ಮಾಡುತ್ತಿದ್ದಾರೆಟ ಎಂದು ಹೇಳಿದರು. ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ನಡೆಸದಿದ್ದರೆ ಕಂಟೆಂಪ್ಟ್ ಮೂವ್ ಮಾಡುತ್ತೇವೆ ಎಂಬ ಜೆಡಿಎಸ್‌ನ ಎ. ಪಿ. ರಂಗನಾಥ್ ಅವರ ಹೇಳಿಕೆ ಬಗ್ಗೆ ಕೇಳಿದಾಗ, ಟಮೊದಲು ಮಾಡಲಿ ಯಾರು ಬೇಡ ಅಂತಿದ್ದಾರೆ? ನಾವೇನು ಚುನಾವಣೆ ಮಾಡೋದಿಲ್ಲ ಅಂತ ಹೇಳಿದ್ದೇವಾ?. ಕಾರ್ಪೊರೇಷನ್ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ನಾವು ಸಿದ್ಧರಿದ್ದೇವೆಟ ಎಂದು ಸ್ಪಷ್ಟಪಡಿಸಿದರು.

## ಸಚಿವ ಸಂಪುಟ ಪುನರ್ ರಚನೆ ಮಾಹಿತಿಯಿಲ್ಲ-ಯತೀಂದ್ರ

ಬದಲಾವಣೆಯಾಗುತ್ತದೆ ಎಂಬ ವಿಚಾರ ಯಾರು ಮಾತನಾಡುತ್ತಿದ್ದಾರೋ ಅವರನ್ನೇ ಕೇಳಬೇಕು. ಪಕ್ಷದಿಂದ ಅಲ್ಪಸಂಖ್ಯಾತ ಸಮುದಾಯದ ನಾಯಕರನ್ನು ಕೈಬಿಡಲಾಗುತ್ತದೆ ಎಂದು ಕೆಲವರು ಹೇಳುತ್ತಿದ್ದು, ಪಕ್ಷದ ವರಿಷ್ಠರಿಗೆ ಎಲ್ಲಾ ಮಾಹಿತಿ ಇರುತ್ತದೆ. ಇದು ಆಂತರಿಕ ವಿಚಾರವಾಗಿದೆ. ಈ ಬಗ್ಗೆ ಮಾತನಾಡುವವರಿಗೆ ಆಂತರಿಕ ವಿಚಾರ ಏನು ಗೊತ್ತಿರುವುದಿಲ್ಲ ಬೇಕಾಬಿಟ್ಟಿ ಮಾತನಾಡುತ್ತಾರೆ ಎಂದರು.

ಸಂಪುಟ ಪುನರ್‌ರಚನೆಯಾದಾಗ ಪ್ರತಿಯೊಬ್ಬ ಶಾಸಕರಿಗೂ ಮಂತ್ರಿ ಸ್ಥಾನ ಸಿಗಬೇಕೆಂಬ ಆಕಾಂಕ್ಷೆ ಇರುತ್ತದೆ. ರಾಯಚೂರು ಜಿಲ್ಲೆಯ ಎಲ್ಲಾ ಶಾಸಕರೂ ಕೂಡ ಸಚಿವ ಸ್ಥಾನಕ್ಕೆ ಅರ್ಹರಿದ್ದಾರೆ. ಆದರೆ ಆಯ್ಕೆ ಮಾಡುವುದು ಹೈಕಮಾಂಡ್‌ಗೆ ಬಿಟ್ಟ ವಿಚಾರವಾಗಿದೆ ಎಂದರು. ಜಿಲ್ಲೆಯಲ್ಲಿ ಸಶಕ್ತ ಕುರುಬ ಸಮಾಜದ ವ್ಯಕ್ತಿಗಳಿದ್ದಾರೆ. ಅವರಿಗೂ ರಾಜಕೀಯ ಪ್ರಾತಿನಿಧ್ಯತೆ ನೀಡಬೇಕು. ಈ ಬಗ್ಗೆ ಮಾತನಾಡಲಾಗುವುದು ಎಂದು ಹೇಳಿದರು. ಈ ಸಂದರ್ಭದಲ್ಲಿ ಗ್ರಾಮೀಣ ಶಾಸಕ ಬಸನಗೌಡ ದದ್ದಲ್, ಕಾಂಗ್ರೆಸ್ ಯುವ ಮುಖಂಡ ರವಿ ಬೋಸರಾಜು, ಮುಖಂಡರಾದ ಕೆ.ಸಿ.ಅಯ್ಯಣ್ಣ, ಶಾಲಂ, ಸಾಜೀದ್ ಸಮೀರ್, ಎಂ.ಈರಣ್ಣ ಸೇರಿ ಅನೇಕರಿದ್ದರು.

## ಬಂಡಾಯ ಏಳದಿದ್ದರೆ ಏಕ ಸಂಸ್ಕೃತಿ ಹೇರುವ ಅಪಾಯ-ಅಲ್ಲಪ್ಪ ಪ್ರಭು ಬೆಟ್ಟದೂರು

ಜನಾಂಗ ಚಳುವಳಿಯಲ್ಲಿ ಬಂದು ಹೋಗ್ತಾರೆ ಇರೋದು ಮಾತ್ರ ಮುದುಕರು ಎಂದರು. ಕೇವಲ ಕೈಬೆರಳಷ್ಟು ಯುವಕರು ಸಿಗ್ತಾರೆ, ಅಂದಿನ ಯುವ ಜನಾಂಗದ ಮನಸ್ಥಿತಿ ಬೇರೆ ಈಗಿನ ಯುವ ಜನಾಂಗದ ಮನಸ್ಥಿತಿ ಬೇರೆಯಾಗಿದೆ, ಉತ್ಸಾಹ, ಕ್ರಾಂತಿ, ಒಂದು ದಿನಕ್ಕೆ ಬದಲಾವಣೆ ಆಗೋದಿಲ್ಲ, ಸಾಂಪ್ರದಾಯಿಕ ಶಕ್ತಿಗಳು ಹೆಚ್ಚಿನ ಪ್ರಮಾಣದಲ್ಲಿ ಬೆಳೆದು ನಿಂತಿವೆ ಎಂದು ತಿಳಿಸಿದರು.

ವೈಚಾರಿಕವಾಗಿ ದಾಳಿಗಳು ನಡೆಯುತ್ತಿವೆ, ಇವುಗಳಿಗೆ ಬಲಿಯಾದವರು ಎಂ.ಎಂ.ಕಲಬುರಗಿ, ಗೌರಿ ಲಂಕೇಶ್, ಅನೇಕರ ಕೊಲೆಗಳಾಗಿವೆ, ಎಲ್ಲಿಯವರೆಗೆ ಸಾಮೂಹಿಕ ನಾಯಕತ್ವ ಇಲ್ಲದಿಲ್ಲವೋ ಅಲ್ಲಿಯವರೆಗೆ ಮುನ್ನುಗ್ಗಲು ಸಾಧ್ಯವಿಲ್ಲ, ಸಾಹಿತ್ಯಕ ನೆಲೆಗಟ್ಟಿನಲ್ಲಿ ಚರ್ಚೆ, ನಿರ್ಣಯಗಳು ಕೈಗೊಳ್ಳುವ ಐಕ್ಯ ಹೋರಾಟದ ಅಗತ್ಯವಿದೆ ಎಂದರು.

ದೇಶ ಮತ್ತು ನಾಡು ಗಟ್ಟಿಗೊಳ್ಳಲು ಬಂಡಾಯದ ಧ್ವನಿ, ದೇಶದ ಜನರು ಒಗ್ಗಟ್ಟಾಗಲು ಅವಶ್ಯಕತೆ ಇದೆ, ಬಂಡಾಯ ಏಳದಿದ್ದರೆ ಬಹು ಸಂಸ್ಕೃತಿ ನಾಶವಾಗಿ ಏಕ ಸಂಸ್ಕೃತಿ ನೆಲೆಹೂರುತ್ತದೆ, ಎದ್ದೇಳು ಕರ್ನಾಟಕದ ಮೂಲಕ ನಾವುಗಳು ರಾಜಕೀಯ ಶಕ್ತಿಗಳ ವಿರುದ್ಧ ಗಟ್ಟಿಯಾಗಿದ್ದೇವೆ, ದೇಶ ಮತ್ತು ರಾಜ್ಯದಲ್ಲಿ ಪರ್ಯಾಯ ರಾಜಕೀಯ ಶಕ್ತಿ ಅವಶ್ಯಕತೆ ಇದೆ ಆದರೆ ಬೇರೆ ಬೇರೆ ಕಡೆಗೆ ಹಂಚಿಗೋಗಿವೆ ಒಂದೆಡೆ ಸೇರಿಸುವ ಅವಶ್ಯವಿದೆ, ಯುವ ಪೀಳಿಗೆ ಬಂಡಾಯದ ಜೊತೆಗಿದ್ದಾರೆ ಆದರೆ ಧೈರ್ಯ ಸಾಲದು ದಿಟ್ಟತನದ ಹೋರಾಟಕ್ಕೆ ಅಣಿಗೊಳಿಸಬೇಕಿದೆ ಎಂದರು.

ಗವಿಸಿದ್ದಪ್ಪ ಪಾಟೀಲ್ ಮಾತನಾಡಿ, ಬಂಡಾಯದ ಸಾಹಿತ್ಯದ ಬೆಳವಣಿಗೆ ಕಡಿಮೆಯಾಗಿದೆ, ಬರಹಗಾರರು, ಲೇಖಕರು ಬಂಡಾಯದ ಎಳೆಯನ್ನು ಹರಡಿಸುವ ಕೆಲಸ ನಡೆಯಬೇಕಿದೆ, ಬಂಡಾಯ ಸಾಹಿತ್ಯಕ್ಕೆ ಯುವಕರ ಆಸಕ್ತಿ ಕೊಡುತ್ತಿಲ್ಲ, ಬಂಡಾಯ ಸಾಹಿತ್ಯದ ಜಿಲ್ಲಾ ಘಟಕಗಳು ನಿಷ್ಕ್ರಿಯವಾಗಿವೆ, ಪ್ರತಿ ತಿಂಗಳು ವರ್ಷಗಳಲ್ಲಿ ಕಾರ್ಯಕ್ರಮ, ಹೋರಾಟಗಳು ರೂಪಿಸಬೇಕಿದೆ ಎಂದರು.

ಅನೇಕ ಸಮಸ್ಯೆ, ವಿಷಯಗಳ ಕುರಿತು ಚರ್ಚೆ ಹೋರಾಟಗಳು ನಿರಂತರವಾಗಿ ನಡೆಯಬೇಕು, ಯುವ ಪಡೆಯನ್ನು ಸಾಹಿತ್ಯದ ಕಡೆಗೆ ಸೆಳೆಯುವ ಮೂಲಕ ಬಂಡಾಯದ ಶಕ್ತಿ ಕಟ್ಟುವ ಕೆಲಸ ಮಾಡಲು ಮಾರ್ಗದರ್ಶನ ನೀಡಬೇಕು ಎಂದರು. ಈ ಸಂದರ್ಭದಲ್ಲಿ ಬಿ.ಎಸ್. ಗೊರವರ, ಸಿ.ಬಿ. ಚಿಲ್ಕರಾಗಿ, ರಾಜಶೇಖರ ಹಳೆಮನಿ, ಪ್ರವೀಣರೆಡ್ಡಿ ಗುಂಜಳ್ಳಿ ಸೇರಿದಂತೆ ಹಿರಿಯ ಸಾಹಿತಿಗಳು ಭಾಗವಹಿಸಿದ್ದರು.

## ಎ.ವಸಂತಕುಮಾರರಿಂದ ವಿವಿದ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ

ಈ ಸಂದರ್ಭದಲ್ಲಿ ನಗರಾಭಿವೃದ್ಧಿ ಪ್ರಾಧಿ ಕಾರದ ಮಾಜಿ ಅಧ್ಯಕ್ಷ ಅಬ್ದುಲ ಕರೀಮ, ಮಹಾನಗರ ಪಾಲಿಕೆ ಮಾಜಿ ಸದಸ್ಯ ಎನ್.ಕೆ. ನಾಗರಾಜ್, ಯೋಜನಾ ಆಯೋಗದ ಸದಸ್ಯ ಡಾ.ರಝಾಕ ಉಸ್ತಾದ, ಜೆ.ಸತ್ಯನಾಥ, ದೀಪಕ ರೆಡ್ಡಿ, ಅಂಜಿನಕುಮಾರ, ಮೊಹಮ್ಮದ ಉಸ್ಮಾನ, ಸೈಯದ ಸುಲ್ತಾನ, ಮೊಹಮ್ಮದ ರಫಿ,ನಿವೃತ್ತ ಇಂಜಿನಿಯರ್ ವೆಂಕಟೇಶ ಹಾಗೂ ಇತರರು ಉಪಸ್ಥಿತರಿದ್ದರು.

## ಬಯಲು ಆಂಜನೇಯ ದೇವಸ್ಥಾನದಲ್ಲಿ ಶ್ರೀ ಶಾಮ ಸುಂದರ ದಾಸರ ಆರಾಧನೆ

ಪ್ರಸಿದ್ಧಿಯಾಗಿದ್ದರು. ಇವರು ಜಗನ್ನಾಥದಾಸರಿಂದ ಸ್ವಪ್ನಾಂಕಿತವನ್ನು ಪಡೆದು ಶಾಮ ಸುಂದರ ವಿಠಲ ಎಂಬ ಅಂಕಿತದಿಂದ ನೂರಾರು ಸಂಕೀರ್ತನೆಗಳನ್ನು, ಸುಳಾದಿಗಳನ್ನು, ಬಯಲಾಟಗಳನ್ನು,ಲಾವಣಿ ಪದಗಳನ್ನು, ಗೀಗಿ ಪದಗಳನ್ನು, ಶೋಬಾನಗೀತೆಗಳನ್ನು, ಜೋಗುಳ ಗೀತೆಗಳನ್ನು, ಕೋಲಾಟ ಪದಗಳನ್ನು ರಚಿಸಿ ಹರಿದಾಸ ಶ್ರೇಷ್ಠ ಆಗಿದ್ದಾರೆ.ಇವರು ರಚಿಸಿದ ಒಂದೊಂದು ಕೃತಿಗಳು ಸಹ ಅತ್ಯಂತ ಮೌಲ್ಯಯುಕ್ತವಾಗಿದೆ. ಮತ್ತು ಪ್ರಸಿದ್ಧಿಯನ್ನು ಪಡೆದಿವೆ. ಇವರು ಅಸ್ಕಿಹಾಳ ಗೋವಿಂದ ದಾಸರು, ಶ್ರೀ ಗುರು ಜಗನ್ನಾಥದಾಸರ ಸಮಕಾಲಿನ ದಾಸರಾಗಿದ್ದರು. ಇವರು ಮಾನವಿಯಲ್ಲಿ ಜಾತ್ಯತೀತವಾಗಿ ಹರಿದಾಸ ದೀಕ್ಷೆ ನೀಡಿ ದಾಸ ಪರಂಪರೆಯನ್ನು ಬೆಳೆಸಿದ ಮಹನೀಯರಾಗಿದ್ದಾರೆ,ಎಂದು ಹೇಳಿದರು. ಪತ್ರಕರ್ತ ಜಯ ಕುಮಾರ್ ದೇಸಾಯಿ ಮಾತನಾಡಿ ಶಾಮಸುಂದರ ದಾಸರು ಕನ್ನಡದ ವರ ಕವಿಯಗಳಾದ ದ.ರಾ. ಬೇಂದ್ರೆ ಅವರ ಮೇಲೆ ಕೃತಿ ರಚಿಸಿ ಅವರಿಂದ ಪ್ರಶಂಸಿಗೆ ಒಳಪಟ್ಟು ಅವರಿಂದ ವರಕವಿಗಳು ಎಂದು ಬಿರದನ್ನು ಪಡೆದ ಹರಿದಾಸರಾಗಿದ್ದಾರೆ ಎಂದರು. ಕಾರ್ಯಕ್ರಮವನ್ನು ಬ್ರಾಹ್ಮಣ ಸಮಾಜದ ಹಿರಿಯ ಮುಖಂಡರಾದ ಪ್ರಸನ್ನ ಆಲಂಪಲ್ಲಿ ಅವರು ಉದ್ಘಾಟಿಸಿದರು. ಶಾಮಸುಂದರದಾಸರ ಕೀರ್ತನೆಗಳನ್ನು ಹಿರಿಯ ದಾಸವಾಣಿ ಕಲಾವಿದ ಸುರೇಶ್ ಕಲ್ಲೂರ ಅವರು ಹಾಡುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಿದರು. ಶಾಮಸಂದರ ದಾಸರ ಭಾವಚಿತ್ರಕ್ಕೆ ಬಯಲು ಆಂಜನೇಯ ದೇವಸ್ಥಾನದ ಅರ್ಚಕರಾದ ಶ್ರೀಧರ ಆಚಾರ್ ಮುಂಗಲಿ ಅವರು ಪೂಜೆಯನ್ನು ಸಲ್ಲಿಸಿ ಮಂಗಳಾರತಿಯನ್ನು ಮಾಡಿದರು. ಈ ಸಂದರ್ಭದಲ್ಲಿ ವೆಂಕಟೇಶ್ ಕೋಲಾರ್, ಗುಂಡಾಚಾರ್ಯ ಹೊಳಗುಂದಿ, ಶ್ರೀಕಾಂತ,ವಾಸುಕಿ ಕರಣಂ ಅದಿತಿಕರಣಂ, ನರಸಿಂಹ ಇವರಿಂದ ದಾಸವಾಣಿ ಜರಗಿತು. ಕಾರ್ಯಕ್ರಮದಲ್ಲಿ ನಿವೃತ್ತ ಪ್ರಾಚಾರ್ಯರಾದ ವೆಂಕಟರಾವ್ ಕುಲಕರ್ಣಿ,ಕೇಶವ ರಾವ್, ಮೋಹನ್ ಪೂಜಾರ್, ಕೃಷ್ಣಮೂರ್ತಿ ಹುಣಸಗಿ, ಲಕ್ಷ್ಮಿಕಾಂತ್ ಕರ್ಣಂ ತುಂಗಭದ್ರ, ನಾಗರತ್ನ ಕಲ್ಲೂರ್, ಹಾಗೂ ಪ್ರತಿಭಾ ಕುಲ್ಕರ್ಣಿ ಉಪಸ್ಥಿತರಿದ್ದರು.

# ಭಂಡಾರಿ ಆಸ್ಪತ್ರೆಯಿಂದ ಮಸರಕಲ್‌ನಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿರ

■ ಕನ್ನಡ ಮಾತೃ ಭೂಮಿ ವಾರ್ತೆ



**ರಾಯಚೂರು,ಏ.26**-ರಾಯಚೂರು ನಗರದ ಎಂ.ಕೆ. ಭಂಡಾರಿ ಆಸ್ಪತ್ರೆ ಸಹಯೋಗ ಶ್ರೀ ಸಾಯಿ ಅಕ್ಕಿನ ಬಳಗವತಿಯಿಂದ ದೇವದುರ್ಗ ತಾಲ್ಲೂಕಿನ ಮಸರಕಲ್ ಗ್ರಾಮದಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿರ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿದ ಗ್ರಾಮದ ಹಿರಿಯರಾದ ಬಾಬುಜಾನ್ ಮಾತನಾಡಿ, ಭಂಡಾರಿ ಆಸ್ಪತ್ರೆಯೂ ನಾವು ನೋಡಿದ ಹಾಗೇ ಸುಮಾರು 30 ವರ್ಷಗಳ ಹಿಂದೆ ಪ್ರಾರಂಭವಾದಂತಹ ಆಸ್ಪತ್ರೆ. ನಮ್ಮ ಗ್ರಾಮದ ಬಹಳಷ್ಟು ಜನರು ವಿಶೇಷವಾಗಿ ನಮ್ಮ ಕುಟುಂಬದವರು ಸಹ ಈ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದಿರುತ್ತಾರೆ. ನನಗೆ ಇವತ್ತು ತುಂಬಾ ಹೆಮ್ಮೆಯಾಗಿದೆ. ಭಂಡಾರಿ ಆಸ್ಪತ್ರೆಯ ಕಿಡ್ನಿ ತಜ್ಞರು, ಹೃದಯ ರೋಗ ತಜ್ಞರು, ಶಸ್ತ್ರಚಿಕಿತ್ಸತಜ್ಞರು ಬಂದು ನಮ್ಮ ಗ್ರಾಮದ ಜನತೆಗೆ ಉಚಿತ ಸಲಹೆ ಮತ್ತು ಚಿಕಿತ್ಸೆಯನ್ನು ಮಾಡಿದಕ್ಕೆ ಅವರಿ'ಗೆ ನಾನು ತುಂಬಾ ಅಭಾರಿಯಾಗಿದ್ದೇನೆ ಎಂದರು.

ಗ್ರಾಮದ ಹಿರಿಯಾರಾದ ಇಸ್ಮಾಯಿಲ್ ಸಾಬ್ ಮಾತಾನಾಡುತ್ತಾ, ಭಂಡಾರಿ ಆಸ್ಪತ್ರೆಯವರು ಸತತ 3 ದಿನಗಳಿಂದ ನಮ್ಮ ಗ್ರಾಮಕ್ಕೆ ಮನೆ ಮನೆಗೆ ಹೋಗಿ ಭಂಡಾರಿ ಆಸ್ಪತ್ರೆಯ ಸಿಬ್ಬಂದಿಗಳಾದ ಪಲ್ಲವಿ, ಗಂಗಧಾರ, ಚಂದ್ರು, ಕವಿತಾ, ಅಂಜೀನೇಯ್ಯ, ನವಿತಾ ಇವರೆಲ್ಲರನ್ನು ಸಂಪರ್ಕಿಸಿ ಡಾ. ರಿಯಾಜುದ್ದೀನ್ ನೇತೃತ್ವದಲ್ಲಿ ಶಿಬಿರ ಆಯೋಜಿಸಿರುವುದಕ್ಕೆ ಧನ್ಯವಾದ ತಿಳಿಸಿದರು.

ಮೂತ್ರಪಿಂಡ ತಜ್ಞರಾದ ಡಾ. ರಘುಕಾಂತ ರೆಡ್ಡಿ ಮಾತಾನಾಡುತ್ತಾ, ತಾವುಗಳು ಆರೋಗ್ಯದ ಕಡೆ ಬಹಳಷ್ಟು ಕಾಳಜಿ ವಹಿಸಿ ತಮ್ಮ ಜೀವನವನ್ನು ಸಾಗಿಸಬೇಕು ಮತ್ತು ಒಳ್ಳೆಯ ಆಹಾರವನ್ನು ಸೇವಿಸಬೇಕು ಎಂದರು.

ಡಾ. ವರುಣ್ ಕುಮಾರ ಮಾತಾನಾಡುತ್ತಾ, ಯಾರಿಗಾದರೂ ಬಿ.ಪಿ. ಶುಗರ್ ಕಂಡುಬಂದಲ್ಲಿ ತಾವುಗಳು ಕೂಡಲೇ ನಿರ್ಲಕ್ಷ್ಯವನ್ನು ವಹಿಸದೇ ವೈದ್ಯರನ್ನು ಸಂಪರ್ಕಿಸಿ ಚಿಕಿತ್ಸೆಯನ್ನು ಪಡೆದುಕೊಳ್ಳಬೇಕೆಂದು ಸಲಹೆ ನೀಡಿದರು.

ಎಂ.ಕೆ. ಭಂಡಾರಿ ಆಸ್ಪತ್ರೆಯ ಆಡಳಿತಾಧಿಕಾರಿ ಡಾ. ಮೊಹ್ಮದ್ ರಿಯಾಜ್‌ವುದ್ದೀನ್ ಮಾತನಾಡಿ, ಗ್ರಾಮದ ಹಿರಿಯರಿಗೆ , ವೈದ್ಯರಿಗೆ, ಮಸರಕಲ್ ಗ್ರಾಮದ ಎಲ್ಲಾ ಜನರಿಗೆ ಭಂಡಾರಿ ಆಸ್ಪತ್ರೆಯ ಅಧ್ಯಕ್ಷರಾದ ಸೌಭಾಗ್ಯರಾಜ್ ಭಂಡಾರಿ ಮತ್ತು ವಿಜಯರಾಜ್ ಭಂಡಾರಿ ಟ್ರಸ್ಟ್ ಇವರ ಪರವಾಗಿ ತಮ್ಮೆಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುವುದಾಗಿ ತಿಳಿಸಿದರು.

ವಿಶೇಷವಾಗಿ ಕೆಲವು ದಿನಗಳ ಹಿಂದೆ ನಮ್ಮ ಆಸ್ಪತ್ರೆಯಲ್ಲಿ ಆಯುಷಮಾನ್ ಭಾರತ ಮತ್ತು ಸರ್ಕಾರಿ ನೌಕರರ ಸಲುವಾಗಿ ಕರ್ನಾಟಕ ಆರೋಗ್ಯ ಸಂಜೀವಿನಿ ಅಡಿಯಲ್ಲಿ ಚಿಕಿತ್ಸೆಯನ್ನು ಕೊಡಲಾಗುತ್ತಿದೆ. ಮತ್ತು ಬಹಳಷ್ಟು ಕ್ಯಾನ್ಸರ್ ಚಿಕಿತ್ಸೆಯೂ ಸಹ ಆಯುಷಮಾನ್ ಭಾರತ ಅಡಿಯಲ್ಲಿ

ನೀಡಲಾಗಿರುತ್ತದೆ. ಇದರ ಸದುಪಯೋಗವನ್ನು ಗ್ರಾಮದಲ್ಲಿ ಯಾರಿಗಾದರೂ ಅವಶ್ಯಕತೆ ಬಿದ್ದರೆ ತಾವುಗಳು ಚಿಕಿತ್ಸೆಯನ್ನು ಪಡೆಯಬೇಕೆಂದರು. ವೇದಿಕೆಯ ಮೇಲೆ ಡಾ.ಶಾರುಖ್ , ಪಲ್ಲವಿ, ಗಂಗಾಧರ, ಮತ್ತು ಗ್ರಾಮದ ಹಿರಿಯರು ಉಪಸ್ಥಿತರಿದ್ದರು. ನೂರಾರು ಜನರಿಗೆ ಆರೋಗ್ಯ ತಪಾಸಣೆ ಮಾಡಲಾಯಿತು.

### ಬಿಇಎಂಎಲ್‌ನಲ್ಲಿ ಬುಲೆಟ್ ರೈಲು ಬೋಗಿ ತಯಾರಿಕಾ ಘಟಕ ಉದ್ಘಾಟನೆ

# ಶೀಘ್ರದಲ್ಲೇ ಬೆಂಗಳೂರು-ಮುಂಬೈ ಮಧ್ಯೆ ಸೂಪರ್ ಫಾಸ್ಟ್ ರೈಲು





**ಬೆಂಗಳೂರು,ಏ.26**-ನಗರದ ಬಿಎಂಎಲ್ ನಲ್ಲಿ ನಿರ್ಮಿಸಿರುವ ಹೈಸ್ಪೀಡ್ ಬುಲೆಟ್ ರೈಲಿನ ಬೋಗಿಗಳ ಉತ್ಪಾದನಾ ಘಟಕವನ್ನು ಕೇಂದ್ರ ರೈಲ್ವೆ, ಎಲೆಕ್ಟ್ರಾನಿಕ್ಸ್ ಮತ್ತು ಐಟಿ ಹಾಗೂ ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಅವರು ಶುಕ್ರವಾರ ಉದ್ಘಾಟಿಸಿದರು. ಇದೇ ವೇಳೆ ಕರ್ನಾಟಕದ ಮುಂಬರುವ ರೈಲ್ವೆ ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು.

ಬಿಎಂಎಲ್‌ನಲ್ಲಿನ ಆದಿತ್ಯ ಘಟಕವು ಭಾರತದ ಸ್ಥಳೀಯ ಹೈ-ಸ್ಪೀಡ್ ಬುಲೆಟ್ ರೈಲಿಗಾಗಿ ಬೋಗಿಗಳನ್ನು ತಯಾರಿಸುತ್ತದೆ. ಇದನ್ನು ಬಿ -28 ಎಂದು ಕರೆಯಲಾಗುತ್ತದೆ. ಈ ಯೋಜನೆಯನ್ನು ಇಂಟೆಗ್ರಲ್ ಕೋಚ್ ಫ್ಯಾಕ್ಟರಿ ಮತ್ತು ಬಿಇಎಂಎಲ್ ಜಂಟಿಯಾಗಿ ವಿನ್ಯಾಸಗೊಳಿಸುತ್ತಿವೆ ಎಂದು ತಿಳಿಸಿದರು.

ಬುಲೆಟ್ ರೈಲಿನ ಆತ್ಮನಿರ್ಭರ್ ಆವೃತ್ತಿ ಬಿ-28 ಅನ್ನು ಐಸಿಎಫ್ ಮತ್ತು ಬಿಇಎಂಎಲ್ ಜಂಟಿಯಾಗಿ ವಿನ್ಯಾಸಗೊಳಿಸುತ್ತಿವೆ. ಬೋಗಿ ತಯಾರಿಕೆಯು ವಿಶೇಷವಾಗಿ ವಿನ್ಯಾಸಗೊಳಿಸಲಾದ ಆದಿತ್ಯ ಘಟಕದಲ್ಲಿ ನಡೆಯಲಿದೆ. ಇದು ರೋಬೋಟಿಕ್ ಲೇಸರ್ ವೆಲ್ಡಿಂಗ್ ವ್ಯವಸ್ಥೆಗಳು ಸೇರಿದಂತೆ ಸುಧಾರಿತ, ಹೆಚ್ಚಿನ ನಿಖರತೆಯ ಯಂತ್ರಗಳನ್ನು ಹೊಂದಿದೆಟ ಎಂದು ಹೇಳಿದರು.

ಮೊದಲ ಮೂಲ ಮಾದರಿಯನ್ನು ಮುಂದಿನ ವರ್ಷದ ಆರಂಭದಲ್ಲಿ ನಿರೀಕ್ಷಿಸಲಾಗಿದ್ದು, 2027ರ ಅಂತ್ಯದ ವೇಳೆಗೆ ಸಂಪೂರ್ಣವಾಗಿ ಸಿದ್ಧಗೊಳ್ಳಲಿದೆ ಎಂದು ಮಾಹಿತಿ ನೀಡಿದರು.

ಇದೇ ವೇಳೆ ಸಚಿವರು ರೈಲ್ವೆ ಮತ್ತು ಮೆಟ್ರೋ ಬೋಗಿಗಳ ತಯಾರಿಕೆಯನ್ನು ಪರಿಶೀಲಿಸಿದರು. ಜೊತೆಗೆ ಬಿಇಎಂಎಲ್ ಅಧಿಕಾರಿಗಳು ಮತ್ತು ಸಿಬ್ಬಂದಿಯೊಂದಿಗೆ ಚರ್ಚೆ ನಡೆಸಿದರು. ರೈಲ್ವೆ ಮಂಡಳಿ ಅಧ್ಯಕ್ಷ ಸತೀಶ್ ಕುಮಾರ್ ಮತ್ತು ಬಿಇಎಂಎಲ್ ವ್ಯವಸ್ಥಾಪಕ ನಿರ್ದೇಶಕ ಶಾಂತನು ರಾಯ್ ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಇದೇ ವೇಳೆ ಹೊಸ ಸಂಪರ್ಕ ಯೋಜನೆಗಳನ್ನು ಪ್ರಕಟಿಸಿದ ವೈಷ್ಣವ್ ಅವರು, ಮುಂಬರುವ ತಿಂಗಳುಗಳಲ್ಲಿ ಬೆಂಗಳೂರು ಮತ್ತು ಮುಂಬೈ ನಡುವೆ ಎರಡು ಹೊಸ ರೈಲು ಸೇವೆಗಳು ಪ್ರಾರಂಭವಾಗಲಿವೆ ಎಂದು ಮಾಹಿತಿ ನೀಡಿದರು.

ಬೆಂಗಳೂರಿನಿಂದ ಮುಂಬೈಗೆ ಎರಡು ರೈಲು: ಟನಾವು ಇನ್ನು ಒಂದೆರಡು ತಿಂಗಳಲ್ಲಿ ಮುಂಬೈಗೆ ಎರಡು ಹೊಸ ಸೇವೆಗಳನ್ನು ಪ್ರಾರಂಭಿಸುತ್ತಿದ್ದೇವೆ: ಬೆಂಗಳೂರಿನಿಂದ ಹುಬ್ಬಳ್ಳಿ-ಧಾರವಾಡ ಮೂಲಕ ಸೂಪರ್‌ಫಾಸ್ಟ್ ಮತ್ತು ಬೆಂಗಳೂರಿನಿಂದ ಮುಂಬೈಗೆ ವಂದೇ ಭಾರತ್ ಸ್ಲೀಪರ್ಟ ರೈಲುಗಳು ಕಾರ್ಯಾರಂಭ ಮಾಡಲಿವೆ ಎಂದಿದ್ದಾರೆ.

ಕರಾವಳಿ ಕರ್ನಾಟಕಕ್ಕೆ ರೈಲು ಸಂಪರ್ಕ ಶೀಘ್ರದಲ್ಲೇ ಸುಧಾರಿಸಲಿದೆ ಎಂದ ಅವರು, ಹಾಸನ-ಮಂಗಳೂರು ಮಾರ್ಗದ ವಿದ್ಯುದೀಕರಣ ಪೂರ್ಣಗೊಂಡಿದ್ದು, ವಂದೇ ಭಾರತ್ ಸೇವೆಗಳು ಶೀಘ್ರದಲ್ಲೇ ಪ್ರಾರಂಭವಾಗುವ ನಿರೀಕ್ಷೆಯಿದೆ ಎಂದಿದ್ದಾರೆ.

ಶೀಘ್ರದಲ್ಲೇ, ಬೆಂಗಳೂರು, ಮಂಗಳೂರು ಮತ್ತು ಮಡಗಾಂವ್ ನಡುವೆ ವಂದೇ ಭಾರತ್ ಎಕ್ಸ್‌ಪ್ರೆಸ್ ಸೇವೆಯನ್ನು ಆರಂಭಿಸುತ್ತೇವೆ. ಇಡೀ ಕರಾವಳಿ ಕರ್ನಾಟಕಕ್ಕೆ ವಂದೇ ಭಾರತ್ ಸೇವೆ ಸಿಗಲಿದೆಟ ಎಂದು ಅವರು ಹೇಳಿದ್ದಾರೆ.

ಗುವಾಹಟಿ ಮತ್ತು ಕೋಲ್ಕತ್ತಾ ನಡುವೆ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ವಂದೇ ಭಾರತ್ ಸ್ಲೀಪರ್ ಸೇವೆಯನ್ನು ಉಲ್ಲೇಖಿಸಿದ ವೈಷ್ಣವ್ ಅವರು, ಇದು ಪ್ರತಿದಿನ ಶೇಕಡಾ 80 ರಿಂದ 90 ರಷ್ಟು ಪ್ರಯಾಣಿಕರನ್ನು ಆಕರ್ಷಿಸುತ್ತಿದೆ. ಈ ರೈಲಿಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ ಎಂದು ತಿಳಿಸಿದರು.

ಬೆಂಗಳೂರು - ಚೆನ್ನೈ ಕಾರಿಡಾರ್ ಸೇರಿದಂತೆ ಮುಂಬರುವ ಹೈಸ್ಪೀಡ್ ರೈಲುಗಳಿಂದ ಉಭಯ ನಗರಗಳ ಪ್ರಯಾಣದ ಸಮಯ 73 ನಿಮಿಷಗಳಿಗೆ ಇಳಿಯಲಿದೆ. ಇದರಿಂದ ಎರಡು ನಗರಗಳ ಸಂಪರ್ಕ ಜಾಲ ಮತ್ತಷ್ಟು ಹೆಚ್ಚಲಿದೆ ಎಂದು ವೈಷ್ಣವ್ ಗಮನಸೆಳೆದರು.

ಇದಕ್ಕೂ ಮುನ್ನ, ಸಚಿವರನ್ನು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪಿಐಬಿ ಬೆಂಗಳೂರಿನ ಹೆಚ್ಚುವರಿ ಮಹಾನಿರ್ದೇಶಕ ಎಸ್. ಜಿ. ರವೀಂದ್ರ ಅವರು ಬರಮಾಡಿಕೊಂಡರು.

## ಟಿಸಿಎಸ್ ವರ್ಲ್ಡ್ 10ಕೆ : ಯದುವೀರ್ ಒಡೆಯರ್ ಭಾಗಿ, ಪುತ್ರರನ್ನೇ ಹಿಂದಿಕ್ಕಿದ ಜಮ್ಮುಕಾಶ್ಮೀರ್ ಸಿಎಂ ಒಮರ್ ಅಬ್ದುಲ್ಲಾ





**ಬೆಂಗಳೂರು,ಏ.26**-ವಿಶ್ವ ಮ್ಯಾರಥಾನ್ ವಿಭಾಗದ ಪ್ರತಿಷ್ಠಿತ ಓಟದ ಸ್ಪರ್ಧೆಯಾದ ಟಟಿಸಿಎಸ್ ವರ್ಲ್ಡ್ 10ಓ ಇಂದು ತನ್ನ 18ನೇ ಆವೃತ್ತಿಯಲ್ಲಿ ಹೊಸ ಇತಿಹಾಸ ಬರೆದಿದೆ. ಬೇಸಿಗೆಯ ಬಿಸಿಲನ್ನೂ ಲೆಕ್ಕಿಸದೆ ನಗರದ 36,000ಕ್ಕೂ ಹೆಚ್ಚು ಕ್ರೀಡಾಸಕ್ತರು ಅತ್ಯಂತ ಉತ್ಸಾಹದಿಂದ ಈ ಓಟದಲ್ಲಿ ಭಾಗವಹಿಸಿದರು.

ಈ ಬಾರಿಯ ಓಟದಲ್ಲಿ ರಾಜಕೀಯ ಮತ್ತು ರಾಜಮನೆತನದ ಗಣ್ಯರು ಭಾಗವಹಿಸಿದ್ದು ವಿಶೇಷವಾಗಿತ್ತು. ಜಮ್ಮು ಮತ್ತು ಕಾಶ್ಮೀರದ ಮುಖ್ಯಮಂತ್ರಿ ಓಮರ್ ಅಬ್ದುಲ್ಲಾ ಅವರು ತಮ್ಮ ಪುತ್ರರಾದ ಝೂಹಿದ್ ಮತ್ತು ಜಮೀರ್ ಅವರೊಂದಿಗೆ ಸ್ಪರ್ಧಿಸಿದರು. ವಿಶೇಷವೆಂದರೆ, ಓಮರ್ ಅಬ್ದುಲ್ಲಾ ಅವರು ಕೇವಲ 50 ನಿಮಿಷಗಳಲ್ಲಿ ಗುರಿ ತಲುಪಿ ತಮ್ಮ ಪುತ್ರರಿಗಿಂತ ಆರು ನಿಮಿಷ ಮುಂಚಿತವಾಗಿ ಓಟ ಪೂರೈಸಿದರು.

ಬೆಂಗಳೂರಿನ ಹವಾಮಾನ ಮತ್ತು ಇಲ್ಲಿನ ಜನರ ಪ್ರೋತ್ಸಾಹ ಅದ್ಭುತವಾಗಿದೆ. ಜನರ ಬೆಂಬಲ ನಮಗೆ ಹೆಚ್ಚಿನ ಶಕ್ತಿಯನ್ನು ನೀಡುತ್ತದೆ ಎಂದು ಓಮರ್ ಅಬ್ದುಲ್ಲಾ ಸಂತಸ ವ್ಯಕ್ತಪಡಿಸಿದರು.

ಮೈಸೂರು ಸಂಸ್ಥಾನದ ಮಹಾರಾಜರು ಹಾಗೂ ಸಂಸದರಾದ ಯದುವೀರ್ ಅವರು ಓಪನ್ ಕೆಟಗರಿಯಲ್ಲಿ ಭಾಗವಹಿಸಿದ್ದರು. ಬೆಂಗಳೂರಿನ ಓಟದ ಸಮುದಾಯದೊಂದಿಗೆ ಬೆರೆಯಲು ಇದು ಉತ್ತಮ ಅವಕಾಶ. ಮುಂದಿನ ದಿನಗಳಲ್ಲಿ ದೆಹಲಿ, ಕೋಲ್ಕತ್ತಾ ಮತ್ತು ಮುಂಬೈ ಓಟಗಳನ್ನೂ ಪೂರ್ಣಗೊಳಿಸಿ ಟಪ್ರೋಕ್ಯಾಮ್ ಸ್ಲ್ಯಾಮ್‌ಟ ಮುಗಿಸುವ ಗುರಿ ಹೊಂದಿದ್ದೇನೆ ಎಂದು ಅವರು ತಿಳಿಸಿದರು.

ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ಅವರು ತಮ್ಮ ಪತ್ನಿ ಶಿವಶ್ರೀ ಅವರೊಂದಿಗೆ ಭಾಗವಹಿಸಿದ್ದರು. ಶಿವಶ್ರೀ ಅವರು ಮೊದಲ ಬಾರಿಗೆ 10ಓ ವಿಭಾಗದಲ್ಲಿ ಭಾಗವಹಿಸಿದ್ದು, ತೇಜಸ್ವಿ ಸೂರ್ಯ ಅವರು 61 ನಿಮಿಷಗಳಲ್ಲಿ ಓಟ ಮುಗಿಸಿ ತಮ್ಮ ಪತ್ನಿಗಾಗಿ ಗುರಿಯ ಬಳಿ ಕಾಯುತ್ತಾ, ಅವರನ್ನು ಪ್ರೋತ್ಸಾಹಿಸಿದರು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿ, ಬೆಂಗಳೂರಿನಲ್ಲಿ ಇಂತಹ ದೊಡ್ಡ ಮಟ್ಟದ ಕ್ರೀಡಾಕೂಟ ಆಯೋಜಿಸುತ್ತಿರುವ ಟಿಸಿಎಸ್ ಸಂಸ್ಥೆಗೆ ಧನ್ಯವಾದಗಳು. 36,000ಕ್ಕೂ ಹೆಚ್ಚು ಮಂದಿ ಭಾಗವಹಿಸಿರುವುದು ನಗರದಲ್ಲಿ ಬೆಳೆಯುತ್ತಿರುವ ಫಿಟ್‌ನೆಸ್ ಸಂಸ್ಕೃತಿಗೆ ಸಾಕ್ಷಿ ಎಂದರು.

ರೊಡ್ರಿಗಸ್ ಕ್ವಿಜೆರಾ ಚಾಂಪಿಯನ್: 18ನೇ ಆವೃತ್ತಿಯ ಟಿಸಿಎಸ್ ವರ್ಲ್ಡ್ 10ಓ ಮ್ಯಾರಥಾನ್‌ನಲ್ಲಿ ಹೊಸ ದಾಖಲೆಗಳು ನಿರ್ಮಾಣವಾದವು. ಅಂತಾರಾಷ್ಟ್ರೀಯ ಎಲೈಟ್ ವಿಭಾಗದಲ್ಲಿ ಬುರುಂಡಿಯ ರೊಡ್ರಿಗಸ್ ಕ್ವಿಜೆರಾ ಪುರುಷರ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರೆ, ಮಹಿಳೆಯರ ವಿಭಾಗದಲ್ಲಿ ರವಾಂಡಾದ ಫ್ಲಾರೆನ್ಸ್ ನಿಯೋನ್ಕುರು ಚೊಚ್ಚಲ ಪ್ರಶಸ್ತಿ ಮುಡಿಗೇರಿಸಿಕೊಂಡರು. ಭಾರತೀಯರ ವಿಭಾಗದಲ್ಲಿ ಸಂಜೀವನಿ ಜಾಧವ್ ಸತತ ಮೂರನೇ ಬಾರಿಗೆ ಚಿನ್ನ ಗೆದ್ದು ಹ್ಯಾಟ್ರಿಕ್ ಸಾಧನೆಗೈದರೆ, ಪುರುಷರ ವಿಭಾಗದಲ್ಲಿ ಹರ್ಮನ್‌ಜೋತ್ ಸಿಂಗ್ ಅಗ್ರಸ್ಥಾನ ಪಡೆದರು.

ಮೂರು ವರ್ಷಗಳ ಹಿಂದೆ ಫೋಟೋ ಫಿನಿಶ್ ನಲ್ಲಿ ಪ್ರಶಸ್ತಿ ಕೈತಪ್ಪಿಸಿಕೊಂಡಿದ್ದ ಬುರುಂಡಿಯ ರೊಡ್ರಿಗಸ್ ಕ್ವಿಜೆರಾ ಈ ಬಾರಿ ಪ್ರಶಸ್ತಿ ಗೆದ್ದರು. ಅವರು 27:31 ಸೆಕೆಂಡುಗಳಲ್ಲಿ ಗುರಿ ತಲುಪಿ, ನಾಲ್ಕು ವರ್ಷಗಳ ಹಿಂದೆ ಕೀನ್ಯಾದ ನಿಕೋಲಸ್ ಕಿಪ್ಕೊರಿರ್ ನಿರ್ಮಿಸಿದ್ದ ದಾಖಲೆಯನ್ನು ಮುರಿದರು. ಈ ಜಯದೊಂದಿಗೆ ಕ್ವಿಜೆರಾ ಒಟ್ಟು 34,000 ಅಮೇರಿಕನ್ ಡಾಲರ್ (ದಾಖಲೆಯ ಬೋನಸ್ ಸೇರಿ) ಬಹುಮಾನ ಗಿಟ್ಟಿಸಿಕೊಂಡರು.

# ವಾರ್ಡ ನಂ.2ರಲ್ಲಿ ಕಲುಷಿತ ಕುಡಿಯುವ ನೀರು ಪೂರೈಕೆ : ಶುದ್ಧ ನೀರು ಪೂರೈಸಲು ಒತ್ತಾಯ

■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.26**-ನಗರದ ವಾರ್ಡ್ ನಂ.2 ರ ವ್ಯಾಪ್ತಿಯ ರಾಗಿಮಾನಗಡ್ಡ, ಜನತಾ ಕ್ವಾಟರ್ಸ್, ಹನುಮಾನ ನಗರ ಬಡಾವಣೆಗಳಲ್ಲಿ ಮಹಾನಗರ ಪಾಲಿಕೆಯಿಂದ ಪೂರೈಕೆಯಾಗುವ ಕುಡಿಯುವ ನೀರು ಕಲುಷಿತವಾಗಿದ್ದು, ಶುದ್ಧ ಕುಡಿಯುವ ನೀರು ಪೂರೈಕೆ ಮಾಡಬೇಕೆಂದು ಸಾಮಾಜಿಕ ಕಾರ್ಯಕರ್ತ ನಾಗೇಶ ಆಶಾಪೂರು ಅವರು ಮಹಾನಗರ ಪಾಲಿಕೆ ಆಯುಕ್ತರಿಗೆ ಮನವಿ ಸಲ್ಲಿಸಿ ಒತ್ತಾಯಿಸಿದ್ದಾರೆ.

ಕಲುಷಿತ ನೀರು ಸೇವಿಸಿದ ಬಡಾವಣೆಯ ಜನರು ಅನೇಕ ರೋಗ ರುಜಿನಗಳಿಗೆ ತುತ್ತಾಗಿದ್ದಾರೆ. ಪ್ರತಿನಿತ್ಯವು ಕಲುಷಿತ ನೀರು ಸರಬರಾಜು ಆಗುತ್ತಿದೆ. ಬಡಾವಣೆಯ ಜನರು ಕಡುಬಡವರಾಗಿದ್ದು, ಹಣ ಕೊಟ್ಟು ನೀರು ಖರೀದಿಸಲು ಸಂಕಷ್ಟ ಅನುಭವಿಸುತ್ತಿದ್ದಾರೆ.

ಕಡು ಬೇಸಿಗೆಯಲ್ಲಿ ಜನತೆ ಕಲುಷಿತ ನೀರು ಕುಡಿಯುತ್ತಿದ್ದು, ಕೂಡಲೇ ಶುದ್ಧ ನೀರು ಪೂರೈಕೆಗೆ ಕ್ರಮಕೈಗೊಳ್ಳಬೇಕು.

ನೀರು ಶುದ್ಧೀಕರಿಸಿ ಬಡಾವಣೆಗಳಿಗೆ ಸರಬರಾಜು ಮಾಡಬೇಕು. ಸದರಿ ಬಡಾವಣೆಗಳಿಗೆ ತಲಾ 2 ರಂತೆ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪನೆ ಮಾಡಬೇಕೆಂದು ನಾಗೇಶ ಆಗ್ರಹಿಸಿದ್ದಾರೆ.

# ಬಸವೇಶ್ವರರ ಪ್ರತಿಮೆ ಚಿಟಗುಪ್ಪಿ ಉದ್ಯಾನವನದಲ್ಲಿ ತಕ್ಷಣವೇ ಸ್ಥಳಾಂತರಕ್ಕೆ ಆಗ್ರಹ

■ ಕನ್ನಡ ಮಾತೃ ಭೂಮಿ ವಾರ್ತೆ



**ಹುಬ್ಬಳ್ಳಿ,**ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವತಿಯಿಂದ ಪ್ರತಿಷ್ಠಾಪಿಸಿರುವ ಸರ್ ಸಿದ್ದಪ್ಪ ಕಂಬಳಿ ಅವರ ಪ್ರತಿಮೆಯನ್ನು ಚಿಟಗುಪ್ಪಿ ಉದ್ಯಾನವನ ಹಾಗೂ ಪಾಲಿಕೆಯ ಮುಂದಿನ ರಸ್ತೆಯು ಸರ್ ಸಿದ್ದಪ್ಪ ಕಂಬಳಿಯವರ ಹೆಸರಿನಿಂದ ಕರೆಯಲ್ಪಡುತ್ತದೆ.

ಅಂದಿನ ಹುಬ್ಬಳ್ಳಿ ಪುರಸಭೆಯ ಪ್ರಥಮ ಪ್ರಜೆಯಾಗಿ ಬಾಂಬೇ ಸರ್ಕಾರದಲ್ಲಿ ಸುಮಾರು ಹುದ್ದೆಗಳನ್ನು ನಿರ್ವಹಿಸಿದ ಈ ಬಾಗದ ರಾಜಕೀಯ ಮೇರು ಪ್ರತಿಮೆಯಾಗಿದ್ದ ಸರ್ ಸಿದ್ದಪ್ಪ ಕಂಬಳಿ ಸಾಹೇಬರನ್ನು ಮೊದಲು ಚಿಟಗುಪ್ಪಿ ಉದ್ಯಾನವನದಲ್ಲಿ ಸ್ಥಳಾಂತರ ಮಾಡದೇ ಏಕಾ ಏಕಿ ಬೇರೆಯವರ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡುತ್ತಿರುವುದು ಪಾಲಿಕೆಯ ನಡೆಯನ್ನು ತೀರ್ವವಾಗಿ ಖಂಡಿಸುತ್ತೇವೆ ಎಂದು ಕನ್ನಡಪರ ಹೋರಾಟಗಾರರಾದ ಶ್ರೀ ಮಂಜುನಾಥ್ ಲೂತಿಮಠ, ಸಂಜೀವ್ ದುಮ್ಮಕನಾಳ್ ಸೇರಿದಂತೆ ಹಲವು ಕಾರ್ಯಕರ್ತರು ಆಕ್ರೋಶ ಹೊರ ಹಾಕಿದ್ದಾರೆ.

ನಮ್ಮ ನಾಡಿಗಾಗಿ ಹೋರಾಟ ಮಾಡಿದ ಮಹನಿಯರಿಗೆ ನಮ್ಮ ನೆಲದಲ್ಲಿ ಮೊದಲು ಆದ್ಯತೆಯನ್ನು

ನೀಡದೆ ಇರುವುದನ್ನು ವಿರೋಧಿಸಿ ಮುಂದಿನ ದಿನಗಳಲ್ಲಿ ನಮ್ಮ ನಾಡಿಗಾಗಿ ಹೋರಾಟ ಮಾಡಿ ಪ್ರಾಣ ತ್ಯಾಗ ಮಾಡಿದ ಮಹನೀಯರನ್ನು ಗುರುತಿಸಿ ಹುಬ್ಬಳ್ಳಿ ಧಾರವಾಡ ಮಹಾನಗರದಲ್ಲಿ ಪ್ರತಿಮೆಗಳನ್ನು ಪ್ರತಿಷ್ಠಾಪನೆ ಮಾಡಬೇಕೆಂದು ವತ್ತಾಯಿಸುತ್ತೇವೆ. ಅತ್ಯಂತ ಅವಶ್ಯವಾಗಿರುವ ಸಾಮಾಜಿಕ ಸಂದೇಶವುಳ್ಳ ಕನ್ನಡ ನಾಡಿನ ನಾಯಕರ ಪ್ರತಿಮೆಗಳನ್ನು ಪ್ರತಿಷ್ಠಾಪನೆ ಮಾಡಬೇಕೆಂದು ಕೋರುತ್ತೇವೆ ಎಂದು ಹು-ಧಾ ಮಹಾನಗರ ಪಾಲಿಕೆ ಅಧಿಕಾರಿಗಳಿಗೆ ಮನವಿ ಪತ್ರ ನೀಡಿದರು.

OWNER, PUBLISHER, PRINTER BY: SHYAM SUNDER L. PUBLISHED FROM: H: NO: 5-3-6, HANUMAN TALKIES ROAD, OPP VAIKUNTAM TEMPLE, NETAJI NAGAR, RAICHUR-584101, DIST: RAICHUR, KARNATAKA AND PRINTED AT: KANNADA MATHRUBHOOMI PRINTERS, SHOP NO: 5-3-6, HANUMAN TALKIES ROAD, OPP VAIKUNTAM TEMPLE, NETAJI NAGAR, RAICHUR-584101, DIST: RAICHUR, KARNATAKA, EDITOR BY: SHYAM SUNDER L